ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಜನವರಿ 6 ರಂದು ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕ ದಿನ ಪಂದ್ಯದಲ್ಲಿ ದೆಹಲಿ ತಂಡದಲ್ಲಿ ವಿರಾಟ್ ಕೊಹ್ಲಿ ಅವರು ಆಡಲಿದ್ದಾರೆ.

30 ಡಿಸೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 288 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜೀವ ಹೆಚ್ಚೋ ? ಸರಂಜಾಮು ಹೆಚ್ಚೋ » 2



ಜನ ಸಾಮಾನ್ಯರ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುವ ಬಿಜೆಪಿ » 3



ಬಾಳ್ಳುಪೇಟೆ ಸಮೀಪ ಸರ್ವಿಸ್ ರಸ್ತೆ ಕಾಮಗಾರಿ ಶೀಘ್ರ ಆರಂಭ » 4

# ಕಾಂಗ್ರೆಸ್ ನರ್ತನಕ್ಕೆ ಜ.24ರಂದು ಪ್ರತ್ಯುತ್ತರ

## 2 ಲಕ್ಷ ಜನರನ್ನು ಸೇರಿಸಿ ಜಿಲ್ಲೆಯಲ್ಲಿ ಜೆಡಿಎಸ್ ಸಮಾವೇಶ: ಹೆಚ್.ಡಿ.ದೇವೇಗೌಡ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಹಿಂದೆಂದೂ ನಡೆಯದ ರೀತಿ ಜ.24ರಂದು ಜೆಡಿಎಸ್ ಸಮಾವೇಶ ನಡೆಸಿ, ಕಾಂಗ್ರೆಸ್ ನರ್ತನಕ್ಕೆ ಪ್ರತ್ಯುತ್ತರ ನೀಡೋಣವೆಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಕಾರ್ಯಕರ್ತರಿಗೆ ಕರೆ ನೀಡಿದರು.

ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಹಾಸನ ಜೆಡಿಎಸ್ ಭದ್ರಕೋಟೆ, ದೇವೇಗೌಡರನ್ನು ಮುಗಿಸಲೇಬೇಕೆಂದು, ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೆ.ಎನ್.ರಾಜಣ್ಣ ಅವರು ಸಮಾವೇಶ ನಡೆಸಿದರೆ, ಈಗಿನ ಉಸ್ತುವಾರಿ ಕೃಷ್ಣಬೈರೇಗೌಡ ಅವರು ಕೂಡ ನಾನೇನು ಕಡಿಮೆ ಇಲ್ಲವೆಂದು ಸಮಾವೇಶ ನಡೆಸಿದ್ದಾರೆ. ರಾಜ್ಯದ 31 ಜಿಲ್ಲೆಯನ್ನು ಬಿಟ್ಟು ಹಾಸನದಲ್ಲೇ ಸಮಾವೇಶ ನಡೆಸಲು ಕಾರಣವೇನೆಂದು ಪ್ರಶ್ನಿಸಿದರು.

ಜ.24 ರಂದು ನಡೆಯುವ ಸಮಾವೇಶಕ್ಕೆ ಪಕ್ಷದ ಶಾಸಕರು, ಮಾಜಿ ಶಾಸಕರು ಸೇರಿ ಕನಿಷ್ಠ 2 ಲಕ್ಷ ಜನರನ್ನು ಸೇರಿಸಬೇಕು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿ ಹಲವು ನಾಯಕರು ಭಾಗವಹಿಸಲಿದ್ದಾರೆ. ಕಾಂಗ್ರೆಸ್ ನವರು ಮಾಡಿದ ಕಾರ್ಯಕ್ರಮಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ನಾವು ಸಮಾವೇಶ ನಡೆಸಬೇಕೆಂದು ಹೇಳಿದರು.

### ಶಕ್ತಿ ಹೆಚ್ಚಿಸಿಕೊಂಡರಷ್ಟೇ ಟಿಕೆಟ್

ನಾವು ಎನ್‌ಡಿಎ ಜೊತೆ ಮೈತ್ರಿಯಲ್ಲಿದ್ದೇವೆ. ಸೀಟು ಹಂಚಿಕೆ ವಿಚಾರದಲ್ಲಿ ಪ್ರಧಾನಿ ಮೋದಿ, ಅಮಿತ್ ಶಾ ಜೊತೆ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳ ಲಾಗುವುದು. ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸಿ, ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡರೆ ವಿಧಾನಸಭೆ ಚುನಾವಣೆ ಸಂದರ್ಭ ಹೆಚ್ಚಿನ ಟಿಕೆಟ್ ಕೇಳಲು ನೈತಿಕತೆ ಇರುತ್ತದೆ. ಆ ನಿಟ್ಟಿನಲ್ಲಿ ಗಮನ ಹರಿಸಬೇಕೆಂದು ದೇವೇಗೌಡರು ಹೇಳಿದರು.



" ನನಗೆ ಇನ್ನೂ ಹೋರಾಟ ಮಾಡುವ ಶಕ್ತಿ ಇದೆ. ಕಾಲುಗಳಲ್ಲಿ ಶಕ್ತಿ ಕಡಿಮೆಯಾಗಿರಬಹುದು. ಆದರೆ, ತಲೆಯಲ್ಲಿ ಶಕ್ತಿ ಇದೆ. ಆ ಶಕ್ತಿಯನ್ನು ನನಗೆ ಜಿಲ್ಲೆಯ ಜನರು ನೀಡಿದ್ದಾರೆ. ನನಗೀಗ 93 ವರ್ಷ. ಕೊನೆಯ ಉಸಿರಿನವರೆಗೂ ಹೋರಾಟ ಮಾಡುತ್ತೇನೆ.

-ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

1962 ರಿಂದ 2025 ರವರೆಗೆ ಈ ಜಿಲ್ಲೆಯ ಜನರು ತಮ್ಮನ್ನು ಬೆಳೆಸಿದ್ದಾರೆ. ನನ್ನ ಆರೋಗ್ಯಕ್ಕಾಗಿ ಕುಟುಂಬಸ್ಥರು ಮತ್ತು ಕಾರ್ಯಕರ್ತರು ನಡೆಸಿದ ಪ್ರಾರ್ಥನೆ ಮಾಡಿದ್ದಾರೆ. ನನ್ನ ಅಳಿಯ ಡಾ.ಸಿ.ಎನ್. ಮಂಜುನಾಥ್ ನನ್ನನ್ನು ಉಳಿಸಲು ಬಹಳ ಪ್ರಯತ್ನ ಮಾಡಿದ್ದಾರೆ. ರೇವಣ್ಣ ನನ್ನ ಆಯಸ್ಸಿಗಾಗಿ ಎಷ್ಟೋ ಪೂಜೆ ಮಾಡಿಸಿದ್ದಾರೆ. ನೀವು ಎಲ್ಲರೂ ನನ್ನ ಆರೋಗ್ಯಕ್ಕಾಗಿ ಪ್ರಾರ್ಥನೆ ಮಾಡಿದ್ದೀರಿ, ಇದನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಕಳೆದ ಎರಡೂವರೆ ವರ್ಷಗಳಲ್ಲಿ ಯಾವುದೇ ಗಮನಾರ್ಹ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಜೆಡಿಎಸ್ ಪಕ್ಷವನ್ನು ದುರ್ಬಲಗೊಳಿಸುವ ಉದ್ದೇಶದಿಂದ ಸಮಾವೇಶ ನಡೆಸಿಕೊಂಡು ಬಂದಿರುವುದು ಸ್ಪಷ್ಟವಾಗಿದೆ. ಅದಕ್ಕೆ ತಕ್ಕ ಉತ್ತರವಾಗಿ ಜಿಲ್ಲೆಯಲ್ಲಿ ನಮ್ಮ ಶಕ್ತಿ ಏನೆಂಬುದನ್ನು ತೋರಿಸಲು ನಾವು ಸಜ್ಜಾಗಬೇಕಾಗಿದೆ. ಇಂದು ರಾಷ್ಟ್ರಮಟ್ಟದಲ್ಲಿ ಜೆಡಿಎಸ್ ಪಕ್ಷಕ್ಕೆ ಅಸ್ತಿತ್ವ ಉಳಿದಿರುವುದಕ್ಕೆ ಪಕ್ಷದ ಕಾರ್ಯಕರ್ತರ ಶ್ರಮವೇ ಕಾರಣ. ನನಗೆ ಈಗ 93 ವರ್ಷ. ಆರೋಗ್ಯ ಸರಿಯಾಗಿಲ್ಲ. ನನಗೆ ಇಬ್ಬರು

» ನಾಲ್ಕನೇ ಪುಟದಲ್ಲಿ

### ರೇವಣ್ಣ ವರ್ಚಸ್ಸು ಕುಗ್ಗಿಸಲು ತಂತ್ರ

ರೇವಣ್ಣ ವಿದ್ಯಾವಂತನಲ್ಲದಿದ್ದರೂ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. ಅವರ ಅವಧಿಯಲ್ಲಿ ಹಲವಾರು ಶಾಲಾ– ಕಾಲೇಜುಗಳು ಹಾಗು ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗಿ ಜಿಲ್ಲೆಯ ಜನರಿಗೆ ದೊಡ್ಡ ಅನುಕೂಲವಾಗಿದೆ. ಜಿಲ್ಲೆಯ ಪ್ರಗತಿಗೆ ರೇವಣ್ಣ ಮಾಡಿದ ಕೆಲಸಗಳ ಪಟ್ಟಿ ಮುಂದೆ ನೀಡುತ್ತೇನೆ. ರೇವಣ್ಣ ವರ್ಚಸ್ಸು ಮುಗಿಸಲು ಏನೇನು ಬೇಕೋ ಮಾಡಿದರು. ಆಗಲಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

# ಕಾಂಗ್ರೆಸ್ ದ್ವೇಷ ರಾಜಕಾರಣಕ್ಕೆ ಹೆದರುವುದಿಲ್ಲ : ಹೆಚ್.ಡಿ.ರೇವಣ್ಣ

## ಕಾರ್ಯಕರ್ತರಿಗೆ ತೊಂದರೆ ಕೊಟ್ಟರೆ ಸುಮ್ಮನಿರಲ್ಲ : ಎಚ್ಚರಿಕೆ

• ಪ್ರಜೋದಯ ವರದಿ

**ಹಾಸನ:** ದ್ವೇಷದ ರಾಜಕಾರಣ ಮಾಡುವ ಪಕ್ಷ ಯಾವುದಾದರೂ ಇದ್ದರೆ ಅದು ಕಾಂಗ್ರೆಸ್. ಇದಕ್ಕೆಲ್ಲಾ ಹೆದರಿ ಕೂರುವುದಿಲ್ಲವೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಗುಡುಗಿದರು.

ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ದೇವೇಗೌಡರನ್ನು ದಮನ ಮಾಡಲು ಮೇಲೆ ಲೋಕಾಯುಕ್ತ, ಸಿಓಡಿನಲ್ಲಿ ಪ್ರಕರಣ ದಾಖಲಿಸಿ ತನಿಖೆ ಮಾಡಿಸಿದರು. ದೇವರ ದಯದಿಂದ ಅದರಿಂದ ಮುಕ್ತರಾದರು. ದೇವೇಗೌಡರು ಮುಖ್ಯಮಂತ್ರಿಯಾದಾಗ ಆ ಪೊಲೀಸ್ ಅಧಿಕಾರಿ ಬಂದು ಕಾಲಿಗೆ ಬಿದ್ದರು. ದೇವೇಗೌಡರು ಮನಸ್ಸಿನಲ್ಲಿ ದ್ವೇಷವಿದ್ದರೆ, ಆ ಅಧಿಕಾರಿಯನ್ನು ಏನು ಬೇಕಾದರೂ ಮಾಡಬಹುದಿತ್ತು. ಆದರೆ, ಅವರು ಹಾಗೇ ಮಾಡಲಿಲ್ಲ ಎಂದರು.

ದೇವೇಗೌಡರು ಶಾಸಕರಾಗಿ, ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಸಂಸದರಾಗಿ, ಪ್ರಧಾನ ಮಂತ್ರಿಯಾಗಿ ಕೆಲಸ ಮಾಡಿದ ದೇಶದ ಏಕೈಕ ನಾಯಕ. ಅವರನ್ನು ಹೇಗೆಲ್ಲಾ ನಡೆಸಿಕೊಳ್ಳಲಾಯಿತು ಎಂಬುದು ಗೊತ್ತಿದೆ.

» ನಾಲ್ಕನೇ ಪುಟದಲ್ಲಿ



" ಪ್ರಧಾನಿ ಮೋದಿ ಅವರು ನಮ್ಮ ನಾಯಕರು, ದೇಶ ಉಳಿಯಬೇಕಾದರೆ ಮೋದಿ ಇರಬೇಕು. ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯಾಗಿದೆ. ಆದರೆ, ಹಾಸನ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್-ಬಿಜೆಪಿ ಕೈಜೋಡಿಸಿದರು. ಜಿಲ್ಲೆಯಲ್ಲಿ ಕಾಂಗ್ರೆಸ್-ಬಿಜೆಪಿ ಒಂದಾಗಿ ಮೋದಿ ಅವರ ವಿರುದ್ಧವಾಗಿ ಕೆಲಸ ಮಾಡಲಾಗುತ್ತಿದೆ.

-ಹೆಚ್.ಡಿ.ರೇವಣ್ಣ, ಮಾಜಿ ಸಚಿವ

# ಪೋಕ್ಸೋ ಪ್ರಕರಣ ನಿಯಂತ್ರಣ ಎಲ್ಲರ ಆದ್ಯತೆಯಾಗಲಿ

## ಜಿಲ್ಲಾಧಿಕಾರಿ ಲತಾಕುಮಾರಿ | ಜಿಲ್ಲಾ ಪತ್ರಕರ್ತರ ಸಂಘದ ಕ್ಯಾಲೆಂಡರ್ ಬಿಡುಗಡೆ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಪೋಕ್ಸೋ ಪ್ರಕರಣಗಳು ಹೆಚ್ಚುತ್ತಿದ್ದು, ಅಪಾಯಕಾರಿ ಸನ್ನಿವೇಶಗಳಿಂದ ಮಕ್ಕಳನ್ನು ಕಾಪಾಡುವ ಗುರುತರ ಜವಾಬ್ದಾರಿ ಪ್ರಜ್ಞಾವಂತ ನಾಗರಿಕರದ್ದಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಹೇಳಿದರು.

ನಗರದ ಜಿಲ್ಲಾ ಪತ್ರಕರ್ತರ ಸಂಘದ ಡಿ.ವಿ.ಜಿ.ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ರಾಷ್ಟ್ರ ಕವಿ ಕುವೆಂಪು ಜನ್ಮ ದಿನಾಚರಣೆ ಹಾಗು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ನೂತನ ಪದಾಧಿಕಾರಿಗಳ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚೆಗೆ ಖಾಸಗಿ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಮಗುವಿಗೆ ಜನ್ಮ ನೀಡಿದ್ದನ್ನು ಉಲ್ಲೇಖಿಸಿದರು. ಜಿಲ್ಲೆಯಲ್ಲಿ ಮಾದಕ ವ್ಯಸನ ತೀವ್ರವಾಗಿದೆ. ಬಾಲ ಗರ್ಭಿಣಿಯರೂ ಹಾಗು ಪೋಕ್ಸೋ ಪ್ರಕರಣ ಹೆಚ್ಚಾಗುತ್ತಿದ್ದು, ನಾವೆಲ್ಲರೂ ಒಟ್ಟಾಗಿ ಅದಕ್ಕೆ ಕಡಿವಾಣ ಹಾಕಬೇಕು. ಸರಿ–ತಪ್ಪುಗಳ ಕುರಿತು ಸಮಾಜಕ್ಕೆ ಅರಿವು ಮೂಡಿಸುವ ಕೆಲಸ ಮಾಧ್ಯಮಗಳದ್ದಾಗಿದೆ. ತಲೆ ತಗ್ಗಿಸುವಂತಹ ಕೆಲಸಗಳು ನಡೆಯದಂತೆ ನಾವೆಲ್ಲರೂ ನೋಡಿಕೊಳ್ಳಬೇಕಿದೆ ಎಂದರು.

2025ಕ್ಕೆ ವಿದಾಯ ಹೇಳಿ ಹೊಸ ವರ್ಷವನ್ನು ಸ್ವಾಗತಿಸಲು ಎಲ್ಲರೂ ಸಜ್ಜಾಗಿದ್ದೇವೆ. ವರ್ಷದ ಕಹಿ ಘಟನೆಗಳನ್ನು ಮರೆತು ಸಿಹಿ ನೆನಪುಗಳೊಂದಿಗೆ ಭವಿಷ್ಯ ಕಟ್ಟಿಕೊಳ್ಳಲು ಪ್ರಯತ್ನಿಸೋಣ. ಹೊಸ ಜೀವನ ಆರಂಭಿಸೋಣವೆಂದರು.

ನಾನು ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡು ಡಿ.19ಕ್ಕೆ 6 ತಿಂಗಳು ಕಳೆದವು. ಆರಂಭದಲ್ಲಿ ಪತ್ರಕರ್ತರು ನೀಡಿದ ಸ್ವಾಗತ ಅವಿಸ್ಮರಣೀಯ. ಹಾಸನಾಂಬ ಉತ್ಸವ ಹೊಸ ದಾಖಲೆ ಸೃಷ್ಟಿಸಿ ಚೆನ್ನಾಗಿ ನಡೆಯಿತು. ಜಿಲ್ಲೆಗೆ 2 ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೇಟಿ ನೀಡಿದ್ದಾರೆ ಎಂದರು.

ಕರ್ನಾಟಕ ಕಾರ್ಯನಿರತ

» ನಾಲ್ಕನೇ ಪುಟದಲ್ಲಿ

# ಜಮೀನು ವ್ಯಾಜ್ಯ: ವ್ಯಕ್ತಿ ನೇಣಿಗೆ ಶರಣು

• ಪ್ರಜೋದಯ ವರದಿ

**ಹಾಸನ:** ತಂದೆಯ ಆಸ್ತಿಯಲ್ಲಿ ತನಗೂ ಸಮಪಾಲು ಕೊಡಬೇಕೆಂದು ಜಗಳ ಮಾಡುತ್ತಿದ್ದ ವ್ಯಕ್ತಿ ಸಹೋದರಿ ಜೊತೆಗೆ ಉಂಟಾದ ವೈಮನಸ್ಸಿನಿಂದ ಬೇಸತ್ತು ನೇಣಿಗೆ ಶರಣಾಗಿರುವ ಘಟನೆ ತಾಲ್ಲೂಕಿನ ಹೆಚ್.ಭೈರಾಪುರ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ರವಿ (42) ಮೃತರು. ತಂದೆ ಮಾಜಿ ಸೈನಿಕರಾಗಿದ್ದು 8 ಎಕರೆ ಜಮೀನು ಖರೀದಿಸಿದ್ದರು. ಆರು ಎಕರೆ ಭೂಮಿಯನ್ನು ಪುತ್ರಿಗೆ ಹಾಗು ಉಳಿದ ಎರಡು ಎಕರೆಯಲ್ಲಿ ಇಬ್ಬರು ಪುತ್ರರಿಗೆ ತಲಾ 1 ಎಕರೆಯನ್ನು ಖಾತೆ ಮಾಡಿಕೊಟ್ಟಿದ್ದರು. ಆದರೆ, ರವಿಯು ಸಮಪಾಲು ಬೇಕೆಂದು ಪಟ್ಟು ಹಿಡಿದಿದ್ದ. ಈ ಸಂಬಂಧ ಸಹೋದರಿ ಜೊತೆಗೆ ನಿತ್ಯವೂ ಜಗಳ ಮಾಡುತ್ತಿದ್ದ ಎನ್ನಲಾಗಿದೆ.

ಮನನೊಂದ ರವಿ, ಸಹೋದರಿ ಖಾತೆ ಮಾಡಿಸಿಕೊಂಡಿರುವ ಜಮೀನಿನಲ್ಲೇ ಇರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸ್ಥಳೀಯ ಸಂಸ್ಥೆಯಲ್ಲೂ ಮೈತ್ರಿ ಮುಂದುವರೆಯಲಿ

## ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಎ.ಮಂಜು ಅಭಿಮತ

• ಪ್ರಜೋದಯ ವರದಿ

**ಹಾಸನ:** ಜೆಡಿಎಸ್-ಬಿಜೆಪಿ ಪಕ್ಷಗಳ ನಡುವಿನ ಮೈತ್ರಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲೂ ಮುಂದುವರೆಯಬೇಕೆಂದು ಮಾಜಿ ಸಚಿವ ಎ. ಮಂಜು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷದ ಚಿಹ್ನೆಯಡಿ ನಡೆಯುವ ಎಲ್ಲಾ ಚುನಾವಣೆಗಳಲ್ಲಿ ಮೈತ್ರಿ ಇರಬೇಕು. ಅದಕ್ಕಾಗಿ ಜೆಡಿಎಸ್-ಬಿಜೆಪಿ ಸಮನ್ವಯ ಸಮಿತಿ ರಚಿಸಬೇಕೆಂದು ಹೇಳಿದರು.

ಮೈತ್ರಿ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಇರುವಾಗ ವ್ಯತಿರಿಕ್ತ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಬಿ.ವೈ. ವಿಜಯೇಂದ್ರ ಅವರು ಯಾರ ಸಹಕಾರ ಇಲ್ಲದೇ ಸ್ವತಂತ್ರವಾಗಿ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಹಿಡಿಯುತ್ತೇವೆಂದು ಹೇಳಿದ್ದಾರೆ. ಅದಕ್ಕೆ ದೇವೇಗೌಡರು ಕೂಡ



ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತೇವೆಂದು ಹೇಳಿದ್ದಾರೆ ಎಂದರು.

ಜನವರಿ 24 ರಂದು ಬಹು ದಿನಗಳ ನಂತರ ಜಿಲ್ಲೆಯಲ್ಲಿ ಜೆಡಿಎಸ್ ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಆಗಮಿಸಲಿದ್ದಾರೆ. ಅಂದು ಎರಡರಿಂದ ಮೂರು ಲಕ್ಷ ಜನರನ್ನು ಸೇರಿಸಲಾಗುವುದು. ಪಕ್ಷದ ಮುಖಂಡರು ತಾಲ್ಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಕರೆ ತರಬೇಕೆಂದು ಹೇಳಿದರು.

ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ ಅವರು ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದಲ್ಲಿ 2,800ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶೇ.50ರಷ್ಟು ಭ್ರಷ್ಟಾಚಾರ ಇದೆ ಎಂಬ ಆರೋಪವನ್ನು ಉಪ ಲೋಕಾಯುಕ್ತರೇ ಮಾಡಿದ್ದಾರೆ. ಸಂಘಟನೆ ಕೊರತೆಯಿಂದ ಕೆಲವು ಚುನಾವಣೆಯಲ್ಲಿ ಸೋಲು ಕಂಡಿದ್ದರೂ ಮುಂದಿನ ದಿನಗಳಲ್ಲಿ ದೇವೇಗೌಡರ ನೇತೃತ್ವದಲ್ಲಿ ಪಕ್ಷ ಬಲವಾಗಿ ಎದುರಿಸಲಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಬಡವರು ಮತ್ತು ರೈತರ ಪರವಾಗಿ ಹೋರಾಡುತ್ತಿರುವ ದೇಶದ ಏಕೈಕ ಮಾಜಿ ಪ್ರಧಾನಿ ದೇವೇಗೌಡರು ಎಂಬುದು ಹೆಮ್ಮೆಯ ಸಂಗತಿ. ಮುಂದಿನ ಅವಧಿಯಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ರಾಜ್ಯದಲ್ಲಿ ಉತ್ತಮ ಆಡಳಿತ ನೀಡಲು ಹೆಚ್.ಡಿ. ಕುಮಾರಸ್ವಾಮಿ ಅವರಿಂದ ಮಾತ್ರ ಸಾಧ್ಯ. ಇನ್ನೂ 25 ವರ್ಷಗಳ ಸುದೀರ್ಘ ರಾಜಕಾರಣ ಮಾಡಲಿದ್ದಾರೆಂದು ತಿಳಿಸಿದರು.

ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಮಾತನಾಡಿ, ಪಕ್ಷದ ಕಾರ್ಯಕರ್ತರು, ಮುಖಂಡರು ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಪಕ್ಷವನ್ನು ಬೂತ್‌ಮಟ್ಟದಿಂದ ಸಂಘಟನೆ ಮಾಡುವ ಕೆಲಸವಾಗಬೇಕಿದೆ ಎಂದು ಕರೆ ನೀಡಿದರು.

" ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರು ತಾವು ಅಧಿಕಾರ ಅನುಭವಿಸಬೇಕೆಂದು ಹೋರಾಟ ನಡೆಸುತ್ತಿಲ್ಲ. ಈ ರಾಜ್ಯ ಸುಭಿಕ್ಷವಾಗಿರಬೇಕೆನ್ನುವ ನಿಟ್ಟಿನಲ್ಲಿ ಹೋರಾಟ ಮಾಡುತ್ತಿದ್ದಾರೆ. ಅವರನ್ನು ಆಶೀರ್ವದಿಸುವ ಕೆಲಸ ಕಾರ್ಯಕರ್ತರಿಂದ ಆಗಬೇಕು.

-ಸಾ.ರಾ.ಮಹೇಶ್, ಮಾಜಿ ಸಚಿವ

# ಜಿಲ್ಲೆಯ 2025ರ ಸಿಹಿ-ಕಹಿ ನೆನಪುಗಳ ಸಮ್ಮಿಲನ

• ಪ್ರಜೋದಯ ವರದಿ

(ಹಿನ್ನೋಟ-ಭಾಗ 1)

**ಹಾಸನ: ವರ್ಷವೊಂದು ಮೌನವಾಗಿ ಉರುಳಿ, ಮತ್ತೊಂದು ವರ್ಷಕ್ಕೆ ಹೆಜ್ಜೆ ಇಡುತ್ತಿದ್ದೇವೆ. ಹಾಸನ ಜಿಲ್ಲೆಯ ಪಾಲಿಗೆ 2025 ಪೂರ್ತಿ ಸಿಹಿಯೂ ಅಲ್ಲ, ಪೂರ್ತಿ ಕಹಿಯೂ ಆಗದೆ ಸಮಭಾವದ ಪಾಠಗಳೊಂದಿಗೆ ವಿದಾಯದ ಹೊಸ್ತಿಲಲ್ಲಿದೆ.**

**ಕಾಡಾನೆ ಹಾವಳಿಯಿಂದ ಜನರ ಸಾವು-ನೋವು ಮುಂದುವರಿದರೆ, ರಾಜಕೀಯವಾಗಿಯೂ ಏರಿಳಿತಗಳನ್ನು ಕಂಡಿದ್ದೇವೆ. ಇನ್ನೆರಡು ದಿನಕ್ಕೆ ಹೊಸ ವರ್ಷಕ್ಕೆ ಕಾಲಿಡುವ ಈ ಸಂದರ್ಭದಲ್ಲಿ 2025ರ ಮೊದಲ ಆರು ತಿಂಗಳು ನಡೆದ ಪ್ರಮುಖ ಘಟನಾವಳಿಗಳ ಸಂಕ್ಷಿಪ್ತ ವಿವರ ಇಲ್ಲಿದೆ**

- ಕಾಡಾನೆ ದಾಳಿಗೆ ಮುಂದುವರಿದ ಸಾವು–ನೋವು
- ಹಾಸನದ ಕೀರ್ತಿ ಹೆಚ್ಚಿಸಿದ ಬೂಕರ್ ಪ್ರಶಸ್ತಿ

### ಪಟೇಲ್ ಶಿವರಾಮ್ ನಿಧನ



ವಿಧಾನ ಪರಿಷತ್ ಮಾಜಿ ಸದಸ್ಯರಾಗಿದ್ದ ಪಟೇಲ್ ಶಿವರಾಮ್ ಅವರು ಜನವರಿ 16ರಂದು ಹಾಸನದ ಅವರ ನಿವಾಸದಲ್ಲಿ ನಿಧನರಾದರು. ಜೆಡಿಎಸ್‌ನ ಪ್ರಮುಖ ನಾಯಕರಾಗಿದ್ದ ಅವರು ಉತ್ತಮ ಸಂಸದೀಯ ಪಟು ಆಗಿದ್ದರು. ಜಿಲ್ಲೆಯ ಅಭಿವೃದ್ಧಿ ಸಂಬಂಧ ಪರಿಷತ್‌ನಲ್ಲಿ ಅತಿ ಹೆಚ್ಚು ಚರ್ಚೆ ನಡೆಸಿದ್ದರೆಂಬ ಖ್ಯಾತಿ ಅವರಿಗೆ ಸಲ್ಲುತ್ತದೆ. ಪಟೇಲ್ ಶಿವರಾಮ್ ಅವರ ಅಂತಿಮ ದರ್ಶನವನ್ನು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಸೇರಿ ಜೆಡಿಎಸ್‌ನ ಹಿರಿಯ ನಾಯಕರು ಪಡೆದಿದ್ದರು.


### ಜಿಲ್ಲೆಯನ್ನೂ ಬಿಡದ ಫೈನಾನ್ಸ್ ಭೂತ

2025ರ ವರ್ಷಾರಂಭದಲ್ಲಿ ರಾಜ್ಯಾದ್ಯಂತ ಫೈನಾನ್ಸ್ ಭೂತ ಜೋರಾಗಿತ್ತು. ಸಾಲಗಾರ ಕಂಪನಿಗಳ ಕಿರುಕುಳ ತಾಳಲಾರದೆ ವಿವಿಧೆಡೆ ಮಹಿಳೆಯರು, ಪುರುಷರು ಆತ್ಮಹತ್ಯೆಗೆ ಶರಣಾದರು. ಅರಕಲಗೂಡು ತಾಲ್ಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ರವಿ ಹಾಗು ರತ್ನ ಎಂಬ ದಂಪತಿಗೆ ಫೈನಾನ್ಸ್ ಸಿಬ್ಬಂದಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕಂತು ಪಾವತಿಗೆ ಒತ್ತಾಯಿಸಿದ್ದರು. ಬಳಿಕ ಜಿಲ್ಲಾ ಪೊಲೀಸರು ತೆರಳಿ ಸಮಸ್ಯೆಗೆ ಇತಿಶ್ರೀ ಹಾಡಿದ್ದರು.

### ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದಕ್ಕೆ ಹತ್ಯೆ

ಚನ್ನರಾಯಪಟ್ಟಣ ತಾಲ್ಲೂಕಿನ ಕುಂಬಾರಹಳ್ಳಿ ಗ್ರಾಮದಲ್ಲಿ ಮಹಿಳೆಯೊಬ್ಬಳು ಅಕ್ರಮ ಸಂಬಂಧಕ್ಕೆ ಪತಿ ಅಡ್ಡಿಯಾಗುತ್ತಿದ್ದಾನೆಂದು ಪ್ರಿಯಕರನೊಟ್ಟಿಗೆ ಸೇರಿ ಸಿನಿಮಿಯಾ ಶೈಲಿಯಲ್ಲಿ ಹತ್ಯೆ ಮಾಡಿದ್ದು ಕಹಿ ನೆನಪು.

### ಭೈರಪ್ಪಗೆ ಹುಟ್ಟೂರಲ್ಲಿ ಸನ್ಮಾನ



ಕನ್ನಡದ ಖ್ಯಾತ ಸಾಹಿತಿ ದಿ. ಎಸ್. ಎಲ್.ಭೈರಪ್ಪ ಅವರಿಗೆ ಹುಟ್ಟೂರಾದ ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದಲ್ಲಿ ಮಾ.9ರಂದು ಗ್ರಾಮಸ್ಥರೆಲ್ಲರೂ ಸೇರಿ ಅದ್ದೂರಿ ಸನ್ಮಾನ ಸಮಾರಂಭ ಏರ್ಪಡಿಸಿದ್ದರು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ ವೇಳೆ ಹುಟ್ಟೂರ ಕೆರೆ ತುಂಬಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದರು. ಹಿರಿಯ ಸಾಹಿತಿಯ ಮನವಿಗೆ ಸ್ಪಂದಿಸಿದ್ದ ಅಂದಿನ ಸರ್ಕಾರ 20 ಕೋ.ರೂ. ವೆಚ್ಚದಲ್ಲಿ ಕೆರೆ ಭರ್ತಿಗೆ ಕ್ರಮ ಕೈಗೊಂಡಿತ್ತು. ಚನ್ನರಾಯಪಟ್ಟಣ, ತಿಪಟೂರು ಭಾಗದ 30ಕ್ಕೂ ಹೆಚ್ಚು ಕೆರೆಗಳು ತುಂಬಿದ್ದಲ್ಲದೆ, ಅಂತರ್ಜಲ ಮಟ್ಟ ವೃದ್ಧಿಯಾಗಿ ಜನರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಭಗೀರಥ ಸ್ವರೂಪಿ ಭೈರಪ್ಪ ಹೆಸರಿನಲ್ಲಿ ಅದ್ದೂರಿ ಸಮಾರಂಭ ಮಾಡಲಾಗಿತ್ತು. ಭೈರಪ್ಪನವರ ಹುಟ್ಟೂರ ಭೇಟಿ ಅದೇ ಕೊನೆಯದಾಯಿತು. ಸೆ.24ರಂದು ಭೈರಪ್ಪ ಅವರು ನಿಧನರಾದರು.

### ನಗರಸಭೆಯಲ್ಲಿ ರಾಜಕೀಯ ಹಗ್ಗ ಜಗ್ಗಾಟ

ಹಾಸನ ಜಿಲ್ಲೆ ಎಂದರೆ ಜೆಡಿಎಸ್‌ನ ಭದ್ರಕೋಟೆ. ನಗರಸಭೆ ಆಡಳಿತ ವಿಚಾರ ಸಾಕಷ್ಟು ಚರ್ಚೆಗೆ ಗ್ರಾಸವಾಯಿತು. ಏ.28ರಂದು ನಗರಸಭೆ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಅವಿಶ್ವಾಸಕ್ಕೆ ಸೋಲಾಗಿ ಎಂ.ಚಂದ್ರೇಗೌಡ ನಗರಸಭೆ ಅಧ್ಯಕ್ಷರಾಗಿ ಮುಂದುವರಿದರು. ಮಾಜಿ ಶಾಸಕ ಪ್ರೀತಮ್ ಗೌಡ ಅವರ ಬಾಹ್ಯ ಬೆಂಬಲದಿಂದ ಅಧ್ಯಕ್ಷರಾಗಿ ಮುಂದುವರಿದರಲ್ಲದೆ ನಗರಸಭೆ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಮೊದಲ ಮೇಯರ್ ಎಂಬ ಪಟ್ಟವನ್ನು ಅಲಂಕರಿಸಿದರು. ನಂತರ ಪಕ್ಷ ವಿರೋಧಿ ಆರೋಪಡಿ ಸದಸ್ಯತ್ವವನ್ನು ರದ್ದಾಗಿ ಜೆಡಿಎಸ್‌ನಿಂದ ಶಾಶ್ವತವಾಗಿ ದೂರ ಉಳಿಯುವಂತಾಯಿತು.

### ಕಟ್ಟಡ ಕುಸಿದು ಇಬ್ಬರ ಸಾವು

ಮಾ. 9ರಂದು ಬೇಲೂರಿನಲ್ಲಿ ವಾಣಿಜ್ಯ ಮಳಿಗೆ ಛಾವಣಿ ಕುಸಿದು ಇಬ್ಬರು ಸಾನ್ನಪ್ಪಿದರು. ಚೀಕನಹಳ್ಳಿ ಸತ್ಯನಾರಾಯಣಗೌಡ ಎಂಬುವವರಿಗೆ ಸೇರಿದ ನಾಲ್ಕು ವಾಣಿಜ್ಯ ಮಳಿಗೆಗಳ ಮುಂಭಾಗದ ಸಜ್ಜೆ ಕುಸಿದು ಅಮರನಾಥ್ ಹಾಗು ನಜೀರ್ ಎಂಬುವರು ಇಹಲೋಕ ತ್ಯಜಿಸಿದರು.

### ಜಿಲ್ಲೆಯ ಸಾಹಿತಿ ಬಾನು ಮುಷ್ತಾಕ್‌ಗೆ ಬೂಕರ್ ಪ್ರಶಸ್ತಿ



ವಕೀಲೆ ಹಾಗು ಸಾಹಿತಿ ಬಾನು ಮುಷ್ತಾಕ್ ಅವರ ಹಸೀನಾ ಮತ್ತು ಇತರ ಕಥೆಗಳು (ಹಾರ್ಟ್ ಲ್ಯಾಂಪ್) ಕಥಾ ಸಂಕಲನಕ್ಕೆ ಮೇ 25ರಂದು ಅಂತರ್ರಾಷ್ಟ್ರೀಯ ಬೂಕರ್ ಪ್ರಶಸ್ತಿ ಲಭಿಸಿತು. ಇದು ಕನ್ನಡದ ಕೃತಿಯೊಂದಕ್ಕೆ ಸಂದ ಮೊದಲ ಬೂಕರ್ ಪ್ರಶಸ್ತಿಯಾಗಿದ್ದು, ಅನುವಾದಕಿ ದೀಪಾ ಭಸ್ತಿ ಅವರಿಗೂ ಗೌರವ ದೊರೆತಿತ್ತು. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಹಾಸನದ ಕೀರ್ತಿಯನ್ನು ಬಾನು ಮುಷ್ತಾಕ್ ಬೆಳಗಿದರು.



### ಕಹಿ ನೆನಪು ಉಳಿಸಿದ ಕಾಡಾನೆಗಳು

ಜಿಲ್ಲೆಯ ಮಲೆನಾಡು ಭಾಗದಲ್ಲಿ ಕಾಡಾನೆಗಳ ಉಪಟಳ ಪ್ರತಿವರ್ಷದಂತೆ ಈ ಬಾರಿಯೂ ಮುಂದುವರಿದಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರ ಎಂಬುದು ಸಾಧ್ಯವಾಗಲೇ ಇಲ್ಲ. ಮಾ.16 ರಿಂದ 22ರ ವರೆಗೆ ಮೂರು ಪುಂಡಾನೆಗಳ ಸೆರೆ ಹಾಗು ಮೂರು ಹೆಣ್ಣಾನೆಗಳಿಗೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ನಡೆಯಿತು. ಎರಡು ತಿಂಗಳಲ್ಲಿ ನಾಲ್ವರು ಕಾರ್ಮಿಕರು ಕಾಡಾನೆ ದಾಳಿಗೆ ಬಲಿಯಾದರು.

ಜ. 22 ರಂದು ಆಲೂರು ತಾಲ್ಲೂಕಿನ ಅಡಿಬೈಲು ಗ್ರಾಮದಲ್ಲಿ ಕಾಡಾನೆ ದಾಳಿಯಿಂದ ಪುಟ್ಟಯ್ಯ (78) ಸ್ಥಳದಲ್ಲೇ ಮೃತಪಟ್ಟಿದ್ದರು. ಫೆ.13 ರಂದು ಬೇಲೂರು ತಾಲ್ಲೂಕಿನ ಬೆಳ್ಳಾವರ ಗ್ರಾಮದಲ್ಲಿ ದ್ಯಾವಮ್ಮ (62) ಎಂಬುವವರು ಕಾಡಾನೆ ದಾಳಿಗೆ ಬಲಿಯಾದರು. ಗ್ರಾಮಸ್ಥರು ಶವ ತೆಗೆಯದೇ ಅರಣ್ಯ ಇಲಾಖೆ ಸಚಿವರು, ಜಿಲ್ಲಾಧಿಕಾರಿ ಸ್ಥಳಕ್ಕೆ ಬರುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರು. ಮಾ.14 ರಂದು ಬೇಲೂರು ತಾಲ್ಲೂಕಿನ ಅರೇಹಳ್ಳಿ ಗ್ರಾಮದಲ್ಲಿ ಸುಶೀಲಮ್ಮ (65) ಮೃತಪಟ್ಟಿದ್ದಾರೆ. ಏ.25 ರಂದು ಸಕಲೇಶಪುರ ತಾಲ್ಲೂಕಿನ ಬೈಕೆರೆ ಗ್ರಾಮದ ಕಾಫಿ ತೋಟದ ಮಾಲೀಕ ಷಣ್ಮುಖ (36) ಮೃತಪಟ್ಟರು. ಮೇ 25 ರಂದು ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿಯ ಅಂಕಿಹಳ್ಳಿ ಗ್ರಾಮದಲ್ಲಿ ಚಂದ್ರಮ್ಮ (45) ಮೃತಪಟ್ಟರು.

### ವಿದ್ಯುತ್ ಸ್ಪರ್ಶದಿಂದ 3 ಆನೆಗಳ ಸಾವು

ಮೇ 10 ರಂದು ಸಕಲೇಶಪುರ ತಾಲ್ಲೂಕಿನ ಸುಳ್ಳಕ್ಕಿ–ಶಾಂತಪುರ ಗ್ರಾಮದ ಬಳಿ 18–20 ವರ್ಷದ ಆನೆಯೊಂದು ವಿದ್ಯುತ್ ಅಪಘಾತದಿಂದ ಮೃತಪಟ್ಟರೆ, ಜೂ. 15ರಂದು ಸಕಲೇಶಪುರ ತಾಲ್ಲೂಕಿನ ಗುಡ್ಡಬೆಟ್ಟ ಗ್ರಾಮದ ಬಳಿಯ ಎಬಿಸಿ ಎಸ್ಟೇಟ್‌ನಲ್ಲಿ ಕಾಡಾನೆ ಹಾಗು ಮರಿಯಾನೆ ವಿದ್ಯುತ್ ಅವಘಡದಿಂದ ಮೃತಪಟ್ಟಿದ್ದವು.



ಜಾಗವಿಲ್ಲ ಎನ್ನುವ ಕಾರಣಕ್ಕೆ ನೆಲದ ಮೇಲೆ ಕಂಪ್ಯೂಟರ್ ಇಟ್ಟಿರುವುದು.

## ಇ-ಕಲಿಕೆಯಲ್ಲಿ ಸ್ಮಾರ್ಟ್ ಆಗದ ಸರಕಾರಿ ಶಾಲೆಗಳು

**ಮೂಲೆಯಲ್ಲಿ ಧೂಳು ತಿನ್ನುತ್ತಿರುವ ಪ್ರೊಜೆಕ್ಟರ್, ಕಂಪ್ಯೂಟರ್**
**ಕೆಲವೆಡೆ ಶಿಕ್ಷಕರಿಗೆ ತರಬೇತಿಯಿಲ್ಲ, ಇನ್ನೊಂದೆಡೆ ಯುಪಿಎಸ್ ಸಮಸ್ಯೆ**

ಶಾಲೆಗಳಲ್ಲಿ ಇ-ಕಲಿಕೆ ವ್ಯವಸ್ಥೆಯ ಸ್ಥಾಪನೆ ಮೂಲಕ ಪ್ರೊಜೆಕ್ಟರು, ಸ್ಮಾರ್ಟ್ ಹಲಗೆ ಮತ್ತು ಇಜಿ ಸಂಬಂಧಿತ ಉಪಕರಣದ ಮೂಲಕ ಸರಕಾರಿ ಶಾಲೆಗಳಲ್ಲಿ ನಡೆಸಲು ಉದ್ದೇಶಿಸಿರುವ ಸ್ಮಾರ್ಟ್ ಕ್ಲಾಸ್‌ಗಳು ಹಲವು ಸಮಸ್ಯೆಗಳಿಂದ ಸೊರಗಿ ಹೋಗಿವೆ. ಇದು ರಾಜ್ಯ ಸೇರಿ ಯಾದಗಿರಿ ಜಿಲ್ಲೆಯಲ್ಲೂ ಇಂತಹ ಸಮಸ್ಯೆ ಎದುರಿಸುತ್ತಿದೆ. ಕೆಲ ಜಿಲ್ಲೆಗಳಲ್ಲಿ ಸಿಎಜಿ ಅಧ್ಯಯನ ನಡೆಸಿರುವ ವರದಿಯಲ್ಲಿಯೂ ಉಲ್ಲೇಖಿಸಲಾಗಿದೆ. ಶಿಕ್ಷಕರು ಕಪ್ಪು ಹಲಗೆಯ ಮೇಲೆ ನಕ್ಷೆ, ಚಿತ್ರಗಳನ್ನು ಬಿಡಿಸಲು ಸಾಕಷ್ಟು ಸಮಯ ವ್ಯರ್ಥ ಮಾಡುತ್ತಿದ್ದರು. ಈಗ ಕಣ್ಣ ಮುಂದೆಯೇ ಎಲ್ಲ ಚಿತ್ರಗಳು ಬರುವ ಕಾರಣ ಉಚಿತ ಕಲಿಕೆ ಸಾಧ್ಯವಾಗುತ್ತದೆ.

ಸ್ಮಾರ್ಟ್ ಕ್ಲಾಸ್ ಸೌಲಭ್ಯ ಕಲ್ಪಿಸುವ ಮೂಲಕ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುವಷ್ಟು ಸಮರ್ಥವಾಗಿಸಲು ಕೆಲ ಸರಕಾರಿ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಮಕ್ಕಳ ಕಲಿಕಾಗುಣ ಮಟ್ಟ ಹೆಚ್ಚಳಕ್ಕಾಗಿ ಗಣಕಯಂತ್ರ, ಪ್ರೊಜೆಕ್ಟರ್, ಟಿವಿ ಸೇರಿದಂತೆ ಇತರರ ಉಪಕರಣಗಳನ್ನು ಸರಕಾರದ ಅನುದಾನ ಮತ್ತು ದಾನಿಗಳು ನೀಡಿದ್ದಾರೆ. ಆದರೆ, ಅಸಲಿಗೆ ಇದ್ಯಾವುದು ಆಗುತ್ತಿಲ್ಲ. ಇವುಗಳ ನಿರ್ವಹಣೆ, ಜಾಗದ ಕೊರತೆ ಹಾಗೂ ಅದಿಲ್ಲ, ಇದ್ದಿಲ್ಲ ಎನ್ನುವ ಕಾರಣಕ್ಕೆ ಮೂಲೆ ಸೇರಿ ಧೂಳು ತಿನ್ನುತ್ತಿವೆ. ಜಿಲ್ಲೆಯ ಕೆಲವು ಶಾಲೆಗಳಲ್ಲಿ ಕಂಪ್ಯೂಟರ್ ನೀಡಲಾಗಿದ್ದು, ಆದರೆ ಇದನ್ನು ಅಳವಡಿಸಲು ಕೋಣೆ ಇರುವುದಿಲ್ಲ. ಇದ್ದರೂ ಸಹಿತ ಶಿಕ್ಷಕರು ಇಲ್ಲ.

ಪ್ರೊಜೆಕ್ಟರ್ ಬಳಕೆಗೆ ಇನ್ನೂ ತರಬೇತಿ ನೀಡಿರುವುದಿಲ್ಲ ಹಾಗೂ ಈ ಪ್ರೊಜೆಕ್ಟರುಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು ಎಂಬುದರ ಬಗ್ಗೆ ಅರಿವು ಸಹ ಇಲ್ಲ ಎನ್ನಲಾಗಿದೆ. ಈ ಕುರಿತು ಕ್ರಮವಹಿಸಿ ಪರಿಹರಿಸಬೇಕಾಗಿರುವ ಅಧಿಕಾರಿಗಳು ಮಾತ್ರ ಯಾವುದೇ ಸಂಬಂಧ ಇಲ್ಲದಂತೆ ವರ್ತಿಸುತ್ತಿದ್ದಾರೆ.

**- ಸ್ಮಾರ್ಟ್ ಕ್ಲಾಸ್‌ಗೆ ತೊಡಕುಗಳೇನು..?**

**- ಕಂಪ್ಯೂಟರ್ ಇಡಲು ಶಾಲೆಗಳಲ್ಲಿ ಕೋಣೆ ಕೊರತೆ**

**- ಪ್ರೊಜೆಕ್ಟರ್ ಬಳಕೆ ಮಾಡುವುದೇ ಶಿಕ್ಷಕರಿಗೆ ಗೊತ್ತಿಲ್ಲ**

**- ತಲೆನೋವಾದ ವಿದ್ಯುತ್, ಯುಪಿಎಸ್ ಸಮಸ್ಯೆ**

**- ನಿರುಪಯುಕ್ತ ವಾದ ಪ್ರಿಂಟರ್‌ಗಳು, ಬದಲಿ ಪ್ರಿಂಟರ್‌ಕಾಟ್ರಿಡ್ಜುಗಳು ದುಬಾರಿ ತೊಡಕು**

**ಆನ್ ಬಾಕ್ಸ್ ಆಗದ ಟಿವಿ:** ಇನ್ನೂ ಸರಕಾರಿ ಶಾಲೆಗಳ ಮಕ್ಕಳ ಭವಿಷ್ಯಕ್ಕೆ ನೆರವಾಗಲಿ ಎನ್ನುವ ಸದುದ್ದೇಶದೊಂದಿಗೆ ಟಿವಿ ನೀಡಲಾಗಿದೆ. ಆದರೆ, ಅದ್ಯಾವುದು ಓಪನ್ ಆಗದೆ ಕೊಟ್ಟ ರೀತಿಯಲ್ಲಿ ಇವೆ ಎನ್ನುತ್ತಾರೆ. ಅದೆ ರೀತಿಯಾಗಿ ಪ್ರೊಜೆಕ್ಟರ್ ಸೇರಿದಂತೆ ಬಹುತೇಕ ಉಪಕರಣಗಳು ನಿರುಯುಕ್ತವಾಗಿದೆ.

**- ವೀರೇಶ ಎಸ್** ಕೆಂಭಾವಿ ಯಾದಗಿರಿ

> **"ಮಕ್ಕಳಿಗೆ ಅನುಕೂಲವಾಗಲಿ, ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಪೂರಕವಾಗಿ ಶಿಕ್ಷಣ ದೊರೆಯಲ್ಲಿ ಎನ್ನುವ ಕಾರಣಕ್ಕೆ ನಮ್ಮ-ಸಂಘಟನೆಯಿಂದ ಶಾಲೆಯೊಂದಕ್ಕೆ ಟಿವಿ ನೀಡಲಾಗಿದೆ. ಆದರೆ, ದುರದೃಷ್ಟವಶಾತ್ ಅದು ಇನ್ನೂ ಬಳಕೆಯಾಗಿಲ್ಲ.**
>
> **- ಹೆಸರು ಹೇಳಲು** ಇಚ್ಛಿಸದ ದಾನಿ


## 30-12-2025 ದಿನ ಭವಿಷ್ಯ



**ಮೇಷ:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು.



**ವೃಷಭ:** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಇನ್ನೂ ಸಂಬಳ ಪಡೆಯದವರು, ಇಂದು ಅವರು ಹಣಕ್ಕಾಗಿ ತುಂಬಾ ಚಿಂತೆ ಮಾಡಬಹುದು ಮತ್ತು ನಿಮ್ಮ ಸ್ನೇಹಿತರಿಂದ ಸಾಲವನ್ನು ಕೇಳಬಹುದು. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.



**ಮಿಥುನ:** ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ. ಸ್ಪರ್ಧಾತ್ಮಕ ಪರೀಕ್ಷೆಗೆ ಹೋಗುತ್ತಿರುವವರು ಶಾಂತವಾಗಿರಬೇಕು.



**ಕರ್ಕಾಟಕ:** ಸಂಗಾತಿಯೊಡನೆ ಚಲನಚಿತ್ರ-ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ಹಠಾತ್ ಪ್ರಣಯ ಪ್ರಸಂಗಗಳು ನಿಮ್ಮನ್ನು ಗೊಂದಲಕ್ಕೀಡು ಮಾಡಬಹುದು.



**ಸಿಂಹ:** ನಿಮ್ಮ ಆರೋಗ್ಯದ ಸಲುವಾಗಿಯಾದರೂ ಕೂಗಬೇಡಿ. ಇಂದು ನಿಮ್ಮ ಕಚೇರಿಯ ಸಹೋದ್ಯೋಗಿ ನಿಮ್ಮ ಅಮೂಲ್ಯವಾದ ವಸ್ತುವನ್ನು ಕದಿಯಬಹುದು, ಆದ್ದರಿಂದ ಇಂದು ನೀವು ನಿಮ್ಮ ವಸ್ತುವನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳಬೇಕು. ಮಕ್ಕಳು ನಿಮ್ಮ ದಿನವನ್ನು ಕಠಿಣಗೊಳಿಸುತ್ತಾರೆ. ಇಂದು ನೀವು ಕುರುಡು ಪ್ರೀತಿಯನ್ನು ಪಡೆಯಲು ಸಾಧ್ಯವಾಗುತ್ತದೆ.



**ಕನ್ಯಾ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ಭಾವನಾತ್ಮಕ ತೊಂದರೆಗಳು ನಿಮ್ಮನ್ನು ಕಾಡುತ್ತವೆ. ಇಂದು ಕೆಲಸದಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ನಿಮ್ಮನ್ನು ಆಲಿಸುತ್ತಾರೆ.



**ತುಲಾ:** ವಿಶ್ರಾಂತಿ ಪ್ರಮುಖವಾದ ಒಂದು ದಿನ ಇತ್ತೀಚೆಗೆ ನೀವು ಬಹಳಷ್ಟು ಮಾನಸಿಕ ಒತ್ತಡ ಎದುರಿಸುತ್ತಿದ್ದೀರಿ - ಮನೋಲ್ಲಾಸ ಮತ್ತು ಮನೋರಂಜನೆ ನಿಮಗೆ ವಿಶ್ರಾಂತಿ ಪಡೆಯಲು ಸಹಾಯ ಮಾಡುತ್ತದೆ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು.




**ವೃಶ್ಚಿಕ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಹಣಕಾಸು ಲಾಭಗಳು ವಿವಿಧ ಮೂಲಗಳಿಂದ ಬರುತ್ತದೆ. ನಿಮ್ಮ ಮನಸಿನಲ್ಲಿ ಒತ್ತಡವಿದ್ದಲ್ಲಿ - ನಿಮ್ಮ ಸಂಬಂಧಿಕರು ಅಥವಾ ಆಪ್ತ ಸ್ನೇಹಿತರೊಡನೆ ಮಾತನಾಡಿ -ಇದು ನಿಮ್ಮ ತಲೆಯ ಹೊರೆಯನ್ನು ಕಡಿಮೆ ಮಾಡುತ್ತದೆ. ಪ್ರಣಯ ನಿಮ್ಮ ಹೃದಯವನ್ನು ಆಳುತ್ತದೆ. ಕೆಲಸದಲ್ಲಿ ಇಂದು ಎಲ್ಲವೂ ನಿಮ್ಮ ಪರವಾಗಿರುತ್ತವೆ.



**ಧನು:** ನಿಮ್ಮ ಮನಸ್ಸು ಇತ್ತೀಚಿನ ಘಟನೆಗಳಿಂದ ತೊಂದರೆಗೊಳಗಾಗುತ್ತದೆ. ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗೆ ಪ್ರಯೋಜನಕಾರಿ ಎಂದು ಸಾಬೀತಾಗುತ್ತದೆ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.



**ಮಕರ:** ಖಂಡಿತವಾಗಿಯೂ ಆರೋಗ್ಯದ ಆರೈಕೆಯ ಅಗತ್ಯವಿದೆ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಅನಿರೀಕ್ಷಿತ ಜವಾಬ್ದಾರಿಗಳು ನಿಮ್ಮ ದಿನದ ಯೋಜನೆಗಳಿಗೆ ಅಡ್ಡಿಪಡಿಸುತ್ತವೆ ನೀವು ಇತರರಿಗೆ ಹೆಚ್ಚು ಮತ್ತು ನಿಮಗಾಗಿ ಕಡಿಮೆ ಮಾಡಿಕೊಳ್ಳುತ್ತೀರಿ. ಇಂದು ನಿಜವಾಗಿಯೂ ಒಳ್ಳೆಯ ದಿನವಾಗಲಿದೆ.



**ಕುಂಭ:** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ಮನೆಯ ಅಗತ್ಯವಾದ ವಸ್ತುಗಾಲ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ ಆದರೆ ಇದರಿಂದ ನೀವು ಭವಿಷ್ಯದ ಅನೇಕ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.



**ಮೀನ:** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ವಿವಾಹಿತ ಜನರು ಇಂದು ತಮ್ಮ ಮಕ್ಕಳ ಶಿಕ್ಷಣದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು, ಇದು ಮನೆಯಲ್ಲಿ ಆತಂಕದ ಕ್ಷಣಗಳು ತರುತ್ತದೆ.

# ಜೀವ ಹೆಚ್ಚೋ? ಸರಂಜಾಮು ಹೆಚ್ಚೋ?

ಮತ್ತೊಂದು ಸ್ಲೀಪರ್ ಬಸ್ ಬೆಂಕಿಗೆ ಆಹುತಿಯಾಗಿ ನಾಲ್ಕಾರು ಜನರನ್ನು ಬಲಿ ಪಡೆಯಿತು. ಕಳೆದ ಹತ್ತು ವರ್ಷಗಳ ಅಂಕಿಸಂಕಿ ನೋಡಿದರೆ, ರಾತ್ರಿವೇಳೆ ಚಲಿಸುವ ಸ್ಲೀಪರ್ ಬಸ್‌ಗಳು ಅಲ್ಲಲ್ಲಿ ಬೆಂಕಿಗೆ ಆಹುತಿಯಾಗಿ, ಹಲವು ಪ್ರಯಾಣಕರ ಬಲಿ ಪಡೆದಿವೆ. ಪದೇ ಪದೇ ಇಂತಹ ಅನಾಹುತ ಆಗುವುದಕ್ಕೆ ಕಾರಣವೇನು? ಬಸ್‌ಗಳಲ್ಲಿ ಸಾಗಿಸುವ ಟನ್‌ಗಟ್ಟಲೆ ಅನಧಿಕೃತ ಲಗೇಜ್ ಮತ್ತು ಕಾನೂನು ನಿಗದಿ ಪಡಿಸಿರುವ ಸುರಕ್ಷಾ ಕ್ರಮಗಳನ್ನು ಗಾಳಿಗೆ ತೂರಿದ್ದೇ ಇಂತಹ ಅನಾಹುತಕ್ಕೆ ಮುಖ್ಯ ಕಾರಣವೆ?

ಪ್ರತಿ ಬಸ್ಸಿನ ಟಾಪ್ ಮೇಲೆ ನಾಲ್ಕು ಅಡಿ ಜಾಗ, ಜನ ಕುಳಿತುಕೊಳ್ಳುವ ಆಸನಗಳ ಕೆಳಗೆ ಮಾಡಿರುವ ಅರೆಗಳು ಆರು ಅಡಿ ಜಾಗ; ಅದರ ಅಗಲ ಉದ್ದ ಹೆಚ್ಚು ಕಡಿಮೆ ಬಸ್ಸುಗಳ ಶೇ. ಮುಕ್ಕಾಲು ಭಾಗ. ಇಷ್ಟೂ ಜಾಗದಲ್ಲಿ ಪೆಂಟ್ ಬಾಕ್ಸುಗಳು, ವೈರ್ ಬಂಡಲ್ಲು, ಬಟ್ಟೆ, ಮೆಟೀರಿಯಲ್ಸ್, ಬೇಕರಿ ಬಾಕ್ಸುಗಳು, ಸರಕು ಬಾಕ್ಸ್‌ಗಳ ಮಡಿಚಿದ ಕಟ್ಟು, ವಿದ್ಯುತ್ ಕೇಸಿಂಗ್ ಕ್ಯಾಬಿನ್ ಬಂಡಲ್ಲು - ಏನಿಲ್ಲವೆಂದರೂ ನೂರಿನ್ನೂರು, ಕಟ್ಟಡ ನಿರ್ಮಾಣ ಸಾಮಗ್ರಿಗಳು ಏನುಂಟು ಏನಿಲ್ಲ, ಜಗತ್ತಿನ ಎಲ್ಲ ವಸ್ತುಗಳೂ ಈ ಜಾಗದಲ್ಲಿ ಒಪ್ಪವಾಗಿ ಇರುತ್ತವೆ; ಜತೆಗೆ ತರಹೇವಾರಿ ಲಗ್ಗೇಜ್ ಹೇರಿಕೊಂಡು ಹೊರಡುವ ಬಸ್ಸಿನ ಕೆಳಭಾಗದಲ್ಲಿ ಇಂಜಿನ್ ಶಾಫ್ಟ್‌ಗಳು, ಕೇಬಲ್ ಟ್ರೆಗಳು, ಇನ್ನಿತರ ವಾಹನ ಸಂಬಂಧಿ ಸಂಪರ್ಕ ವ್ಯವಸ್ಥೆ, ಆಯಿಲ್ ಲೈನ್‌ಗಳು ಹೀಗೆ ದಹನಾನುಕೂಲಿ ಸಕಲ ವ್ಯವಸ್ಥೆ ಅತ್ತಿಂದಿತ್ತ, ಹಾಯ್ದು ಹೋಗಿರುತ್ತದೆ.

ಇಂಥ, ಭಾರೀ ಲೋಡು ತುಂಬಿಕೊಂಡು ಹೊರಡುವ ಬಸ್ಸಿನ ಇಂಜಿನ್ ಹಿಂಭಾಗದಲ್ಲಿದ್ದರೆ, ಚಾಲಕ ಮುಂಭಾಗದಲ್ಲಿ. ಲೈಟಿಂಗ್ ಪ್ಯಾನಲ್ಲು, ಬ್ಯಾಟರಿ ಸಂಪರ್ಕ, ಗೇರ್ ಬಾಕ್ಸು, ಅದರ ಆಯಿಲ್ ಟ್ಯಾಂಕು, ಇಂಜಿನಿ ಆಯಿಲ್ ಜೊತೆಗೆ ಈ ಎಲ್ಲ ನಿಯಂತ್ರಣಗಳ ಸಹಿತ ಬಸ್ಸಿನ ಎರ್ ಕಂಡಿಶನ್ ಪೂರೈಕೆ ಲೈನ್ ಮತ್ತು ಸಂಪರ್ಕ ಜೊತೆಗೆ, ಅವುಗಳನ್ನು ನಿಯಂತ್ರಿಸುವ ನಾಬ್‌ಗಳು, ಮೇಲ್ಗಡೆ ಪ್ರತಿ ಆಸನಕ್ಕೂ ಲೈಟ್ ವ್ಯವಸ್ಥೆಗಾಗಿ ವಿದ್ಯುತ್ ಸಂಪರ್ಕ ವ್ಯವಸ್ಥೆ, ಮೊಬೈಲ್ ಚಾರ್ಜರ್ ಪಾಯಿಂಟ್, ಅದಕ್ಕಾಗಿ ಕೇಬಲ್ ಕೇಸಿಂಗ್ ಕ್ಯಾಬಿನ್ನು, ಹೀಗೆ ಬರೆಯುತ್ತಾ ಹೋದರೆ ಪ್ರಯಾಣಿಕ ಕುಳಿತು ಅಥವಾ ಮಲಗುವ ಸೀಟಿನ್ ಕೆಳಗೂ ನಾನಾ ರೀತಿಯ ದಹನಾನುಕೂಲಿ ವಸ್ತುಗಳು!

ಅಕಸ್ಮಾತ್ ಕಡ್ಡಿ ಗೀರಿದರೆ ಮೂವತ್ತೇ ಸೆಕೆಂಡ್‌ನಲ್ಲಿ ದಾವಾನಲವಾಗಲು ಏನು ಬೇಕೋ ಅದೆಲ್ಲ ಇಲ್ಲಿ ಬೆರಳಂಚಿಗೆ ಲಭ್ಯ. ಜೀವ ಮಾತ್ರ ದಕ್ಕುವುದಿಲ್ಲ. ಇದು ಸಣ್ಣ ಸರಳ ವಿವರಣೆ; ಮೊನ್ನೆ ಚಿತ್ರದುರ್ಗದ ಸನಿಹ ಮತ್ತು ಕಳೆದ ಹತ್ತು ವರ್ಷದಲ್ಲಿ ಹೀಗೆ ಉರಿದು ಬಲಿಯಾದ ಸುಮಾರು ನೂರಾರು ಹೆಚ್ಚು ಜೀವ ಪಡೆದ ಬಸ್ಸುಗಳ ಮಾಹಿತಿ.

ಆದರೂ ಯಾವುದೇ ಅಧಿಕಾರಿ, ಜನನಾಯಕ ನಿಮ್ಮ ಬಸ್ಸಿನಲ್ಲಿ ಜನರ ಹೊರತಾಗಿ ಇದೆಲ್ಲ ವಸ್ತು ಸಾಗಾಟ ಯಾಕಯ್ಯ ಮಾಡ್ತೀರಿ? ಎಂದು ಕೇಳಿ, ಸುದ್ದಿ ಮಾಡಿದ ಉದಾಹರಣೆ ಒಂದೇ ಒಂದೂ ಇಲ್ಲ!


ಈ ರೀತಿ ಟನ್‌ಗಟ್ಟಲೆ ಲಗೇಜನ್ನು ಪ್ರಯಾಣಿಕರ ಬಸ್ಸಿನಲ್ಲಿ ಸಾಗಿಸುವುದು ಕಾನೂನು ಬಾಹಿರ! ಆದರೂ, ಕಾನೂನು ಕ್ರಮ ಜರುಗಿಸಿ, ಸುದ್ದಿ ಮಾಡಿದ ಅಧಿಕಾರಿಯೋ, ನಾಯಕರೋ ಇಲ್ಲ!

ಇದರ ಹೊರತಾಗಿಯೂ, ಹಿಂದಿನ ಇಂಜಿನ್‌ನಿಂದ ಮುಂದಿನ ಚಾಲನೆಗೆ ಸಂಪರ್ಕ ಕಾರಣ ಬಸ್ಸು ಯಾವಾಗಲೂ ಕುಲುಮೆಯ ರೇಂಜ್‌ನ ಶಾಫ್ಟ್‌ಗಳ ಮೇಲೆ ಚಲಿಸುತ್ತಿದ್ದರೆ, ಬಸ್ಸಿನ ಪ್ರತಿ ಬಾಗಿಲು ಕಿಟಕಿಗಳು ಮಾತ್ರ ಯಾವಾಗಲೂ ಜಾಮ್. ಇನ್ನು ನಿಯಂತ್ರಕನ ಅಕ್ಕ ಪಕ್ಕದ ಪ್ಯಾನೆಲ್ ಮತ್ತು ಅದರ ಸಂವಹನ ಮಾಧ್ಯಮವೆಲ್ಲ ಬಸ್ಸಿನ ಪೂರ್ತಿ ಸುತ್ತು ಆವರಿಸಿರುತ್ತದೆ.

ಈಗೀಗ ಪ್ರತಿ ಆಸನದ ಮುಂದೆ ಟಿ.ವಿ. ಪ್ಯಾನೆಲ್ ಸ್ಕ್ರೀನು, ಅದರ ಪ್ರತ್ಯೇಕ ಕೇಬಲ್ ಸಂಪರ್ಕ, ಅದರ ನಿಯಂತ್ರಣದ ಮತ್ತೊಂದು ವೈರು ಜಾಲ, ಹಿಂಭಾಗದ ಲೈಟುಗಳು, ಬ್ರೆಕ್ ಲೈಟು, ಶೋಕಿಗಾಗಿ ಮಾಡಿಸಿರುವ ಪುಕುಪುಕು ಲೈಟುಗಳು, ಬ್ರೇಕ್ ಅದುಮಿದಾಗ ಮತ್ತು ಇನ್ನಿತರ ಕಾರಣಕ್ಕೆ ವಿಭಿನ್ನವಾಗಿ ಜೋಡಿಸಿದ ಆಯಾ ಬಣ್ಣದ ಲೈಟುಗಳ ಸುತ್ತುವರಿದ ಕೇಬಲ್ ಕೇಸಿಂಗ್‌ನ ದೊಡ್ಡ ಸರಪಳಿ ನಮ್ಮ ಸುತ್ತ ಬಿಗಿದೇ ಇರುತ್ತದೆ. ಪ್ರತಿಯೊಂದು ವಿದ್ಯುತ್ ಪ್ರವಹಿಸುವ ಜೀವಂತ ಜಾಲಕ್ಕೆ ಅಗ್ನಿ ಸಿಕ್ಕರೆ ಸೆಕೆಂಡ್ ಕಾಲಾವಧಿ ಸಾಕು ಆವರಿಸಿ ಕೊಳ್ಳಲು.

**ಮುಖ್ಯ ಬಾಗಿಲು ಲಾಕ್!**

ಸುಲಭಕ್ಕೆ ತೆರೆದುಕೊಳ್ಳಲಾಗದ ಈ ವ್ಯವಸ್ಥೆ, ಅಕಸ್ಮಾತ್ ಅಪಘಾತವಾದರೆ, ಆಟೊ ಮೋಡ್‌ಗೆ ಹೋಗುವ ವ್ಯವಸ್ಥೆಯಿಂದ ಮುಖ್ಯ ದ್ವಾರವೇ ಲಾಕ್ ಆಗಿ ಬಿಡುತ್ತದೆ. ಕಾರಣ, ಮೊದಲು ಸ್ಥಗಿತಗೊಳ್ಳುವುದೇ ಬ್ಯಾಟರಿ! ಅದರ ಬಲವಿಲ್ಲದೆ ಹೈಡ್ರಾಲಿಕ್ ವ್ಯವಸ್ಥೆಯ ಬಾಗಿಲು ಸೇರಿದಂತೆ ಎಲ್ಲ ಸಂಪರ್ಕಗಳು ಕಡಿತಗೊಂಡು ಬಸ್ಸು ಉರಿಯಲು ಸಿದ್ಧವಾದ ಕುಲುಮೆಯ ಪೆಟ್ಟಿಗೆಯಂತಾಗಿ ಬಿಡುತ್ತದೆ.



> ಅಕಸ್ಮಾತ್ ಕಡ್ಡಿ ಗೀರಿದರೆ ಮೂವತ್ತೇ ಸೆಕೆಂಡ್‌ನಲ್ಲಿ ದಾವಾನಲವಾಗಲು ಏನು ಬೇಕೋ ಅದೆಲ್ಲ ಇಲ್ಲಿ ಬೆರಳಂಚಿಗೆ ಲಭ್ಯ. ಜೀವ ಮಾತ್ರ ದಕ್ಕುವುದಿಲ್ಲ. ಇದು ಸಣ್ಣ ಸರಳ ವಿವರಣೆ; ಮೊನ್ನೆ ಚಿತ್ರದುರ್ಗದ ಸನಿಹ ಮತ್ತು ಕಳೆದ ಹತ್ತು ವರ್ಷದಲ್ಲಿ ಹೀಗೆ ಉರಿದು ಬಲಿಯಾದ ಸುಮಾರು ನೂರಾರು ಹೆಚ್ಚು ಜೀವ ಪಡೆದ ಬಸ್ಸುಗಳ ಮಾಹಿತಿ.
>
> - ಸಂತೋಷಕುಮಾರ ಮೆಹೆಂದಳೆ

ಇದಕ್ಕೆ ಬೆಂಕಿ ತಗುಲಿದರೆ ಮೂವತ್ತರಿಂದ ನೂರೆಂಭತ್ತು ಸೆಕೆಂಡು ಸಾಕು ಪೂರ್ತಿ ಆವರಿಸಲು. ಅಷ್ಟರೊಳಗೆ ಕನಿಷ್ಠ ಮೂವತ್ತೆರಡು ಜೀವಗಳು, ತಾವಿರುವ ಸೀಟಿನಿಂದ ಎದ್ದು, ಕಿಟಕಿ ತೆರೆಯಲಾಗುತ್ತಿಲ್ಲ, ಎಂದು ಗೊತ್ತಾಗಿ ಇರುವ ಸಲಕರಣೆ ಹುಡುಕಿ, ಕಿಟಕಿ ಬಡಿದಾಡಿ ಅಂತೂ ದಕ್ಕುವ ಮಾರ್ಗದಲ್ಲಿ ಹೊರಕ್ಕೆ ಬರಬೇಕು. ಇದರ ಸಾಧ್ಯತೆ ಶೇ. ಕಾಲು ಭಾಗ ಮಾತ್ರ. ಕಾರಣ ಹಾಗೆ ಬೆಂಕಿ ತಗಲುತ್ತಿದ್ದಂತೆ ಗೂಡಿನಿಂದ ಹೊರ ಬೀಳುವ ಆತುರದಲ್ಲಿ ಎಲ್ಲರೂ ಮೊದಲು ಕಾಲಿಕ್ಕುವುದೇ ಪ್ಯಾಸೆಜ್ ಗ್ಯಾಪ್‌ನಲ್ಲಿ. ಇದು ಕೇವಲ ಎರಡಡಿಗೂ ಕಮ್ಮಿ ಜಾಗದಲ್ಲಿ, ಉಳಿದೆಲ್ಲ ತಲೆ ಎತ್ತಲಾಗದ ಅರೆಗಳೆ.

ಅಲ್ಲಿ ಒಮ್ಮೆ ಆಗುವ ಟ್ರಾಫಿಕ್ ಜಾಮ್‌ನಿಂದಾಗಿ ಬದುಕು ಉಳಿಸಿಕೊಳ್ಳಬಹುದಾದ ಅವಕಾಶ ಕೇವಲ ಶೇ. ಹತ್ತು ಮಾತ್ರ. ಈ ಪ್ಯಾಸೆಜ್‌ನಲ್ಲಿ ಸಾಲಾಗಿ ನಿಂತರೆ ಹೆಚ್ಚೆಂದರೆ ಹದಿನೈದು ಹದಿನಾರು ಜನ ನಿಲ್ಲಬಹುದು. ಮಾಡಿಕೊಳ್ಳಿ ಉಳಿದವರ ಕತೆ?

**ದಹನಾನುಕೂಲಿ ಸಾಮಾನು ಸರಂಜಾಮು**

ಈಗ ಹೇಳಿ, ಬಸ್‌ಗೆ ಬೆಂಕಿ ಹತ್ತಲು ಡಿಸೈಲ್ ಟ್ಯಾಂಕಿಗೇ ಬೆಂಕಿ ಬೀಳಬೇಕೆ? ಒಂದು ಗೊತ್ತಿರಲಿ. ಯಾವುದೇ ವಾಹನದ -ಯೆಲ್ ಬಾಕ್ಸ್ ಅಥವಾ ಇಂಧನ ಪೆಟ್ಟಿಗೆ ಎಲ್ಲದಕ್ಕಿಂತ ಹೆಚ್ಚಿನ ಸುರಕ್ಷಿತ ಜಾಗದಲ್ಲಿರುತ್ತದೆ. ಅದು ಉರಿಯುವುದೇ ಕೊನೆಯ ಹಂತದಲ್ಲಿ. ಅದಕ್ಕೂ ಮೊದಲೇ ಹೊರಟು ಅರ್ಧ ಗಂಟೆಯಲ್ಲೇ ಕುಲುಮೆಯಂತಾಗುವ ವಾಹನದ ಯಾವುದೇ ಭಾಗಕ್ಕೆ ಬೆಂಕಿ ಕಿಡಿ ಬಿದ್ದರೂ ಉರಿಯಲು ಸಿದ್ಧವಾಗಿರುವಷ್ಟು ತೀವ್ರ ಉಷ್ಣ ಉತ್ಪನ್ನ ಆಗುತ್ತಲೇ ಇರುತ್ತದೆ. ಅದರಲ್ಲೂ ಇಂಜಿನ್‌ನ ಯಾವುದೇ ಭಾಗ ನೋಡಿ ನಿಗಿನಿಗಿ ಎನ್ನುತ್ತಿರುತ್ತದೆ. ಹೀಗಿದ್ದಾಗ ಪ್ರತಿಯೊಬ್ಬರೂ ಡಿಸೆಲ್ ಟ್ಯಾಂಕ್‌ನಿಂದ ಬೆಂಕಿ ಎನ್ನುವ ಮೊದಲು, ಈ ಅರೆಗಳಲ್ಲಿ ಕೂಡಿಡುವ ಸಾಮಾನು ಸರಂಜಾಮುಗಳ ಕಡೆಗೊಮ್ಮೆ ಗಮನ ಹರಿಸಿ.

**ತಾನಾಗಿಯೇ ಪುಡಿಯಾಗುವ ಕಿಟಕಿ?**

ಕಾರಣ ಹೀಗೆ, ಬೆಂಕಿಗೆ ಸಿಲುಕುವ ಪಯಣದಲ್ಲಿ ಸುಲಭಕ್ಕೆ ಒಡೆಯಬಲ್ಲ ಗಾಜುಗಳ ಬಳಕೆ ಆಗದಿರುವುದು ಸೇರಿದಂತೆ ಸರಕಾರಿ ವಾಹನ ಸೌಲಭ್ಯಗಳು ಸಾಕಷ್ಟು ಅನುಕೂಲಕಾರಿ ಆಗಿಲ್ಲದಿರುವುದು ಈ ಕುಲುಮೆ ಬಸ್‌ಗಳನ್ನು ಜನ ಕಾಯ್ದು ನಿಲ್ಲುವ ಕೆಂಡದ ಮೇಲೆ ಮಲಗಿ ಪಯಣಿಸುತ್ತಿದ್ದಾರೆ. ಫೈರ್ ಎಕ್ಸ್ಟಿಂಗ್ವಿಶರ್ ನಮ್ಮಲ್ಲಿ ಎಷ್ಟು ಬಸ್‌ನಲ್ಲಿ ಎಷ್ಟು ಪ್ರಮಾಣದಲ್ಲಿದೆ? 2013 ರಲ್ಲಿ ಕೋರ್ಟೊಂದು ಪ್ರತಿ ಬಸ್ಸಿನ ಕಿಟಕಿಗಳೂ ಮತ್ತು ಗಾಜಿನ ಬಾಗಿಲು ಇತ್ಯಾದಿ ನಿರ್ದಿಷ್ಟ ಅಘಾತದ ಹೊಡೆತಕ್ಕೆ ತಾನಾಗೇ ಪುಡಿಯಾಗಿ ಉದುರುವ ಗಾಜುಗಳನ್ನೇ ಹೊಂದಿರಬೇಕು ಎಂದು ಆದೇಶ ಜಾರಿ ಮಾಡಿತ್ತು. ಇದನ್ನು ಪಾಲಿಸುವವರು ಕಡಿಮೆ. ವರ್ಷಕ್ಕೊಮ್ಮೆಯಾದರೂ ಹೆದ್ದಾರಿಯಲ್ಲಿ ಬೆಂಕಿಗೆ ಆಹುತಿಯಾಗುವ ಬಸ್ ಪ್ರಕರಣ ಆದಾಗಲೆಲ್ಲ ನಾವು ಎದ್ದು ಕೂರುತ್ತೇವೆ; ಆದರೆ ದಿನವೀಡಿ ನಮ್ಮೆದುರೇ ಮೇಲೂ ಒಳಗೂ ನಾಲ್ಕು, ಆರು ಅಡಿ ಮಿಕ್ಕಿ ಲಗೇಜು ಹೇರುವ ಬಗ್ಗೆ ಸರಕಾರದ ಯಂತ್ರ ಕುಂಯ್ ಎನ್ನುವುದೇ ಇಲ್ಲ. ಅಸಲಿಗೆ, ಕೇವಲ ಪಯಣಕ್ಕಾಗಿ ಮಾತ್ರ ಇರುವ ಪರ್ಮಿಟ್‌ನಲ್ಲಿ ನಮ್ಮ ಖಾಸಗಿ ಲಗ್ಗೇಜ್ ಬಿಟ್ಟರೆ ಬೇರೆ ಸಾಗಾಣಿಕೆಗೆ ಅನುಮತಿ ಇಲ್ಲವೇ ಇಲ್ಲ. ಪೊಲೀಸ್ ಅಥವಾ ಸಾರಿಗೆ ಇಲಾಖೆ ಮನಸ್ಸು ಮಾಡಿದರೆದನ್ನು ತಡೆಯಬಹುದು. ದಿನವೊಂದಕ್ಕೆ ಬೆಂಗಳೂರಿನಿಂದ ಹೊರಹೋಗುವ ಒಂದೊಂದು ಬಸ್‌ಗೂ ಕೇವಲ ಐದೇ ಟನ್ ಲೆಕ್ಕಿಸಿದರೂ, ರಾತ್ರಿ ಒಂದು ಹೊತ್ತಿನಲ್ಲಿ ಅನಾಮತ್ತು ಹನ್ನೆರಡರಿಂದ, ಹದಿನೈದು ಸಾವಿರ ಟನ್ ಕುಲುಮೆಗಳು ನಮ್ಮನ್ನು ಉರಿಸಲು ಸತತವಾಗಿ ಎಂಭತ್ತರಿಂದ ನೂರರ ವೇಗದಲ್ಲಿ ಚಲಿಸುತ್ತಲೇ ಇರುತ್ತವೆ. ನಮ್ಮ ಅದೃಷ್ಟ ಚೆನ್ನಾಗಿದ್ದಷ್ಟೂ ನಾವು ಬದುಕುತ್ತಿದ್ದೇವೆ, ಅಷ್ಟೆ!

**ಕೇಬಲ್ ಟ್ರೇಗೆ ಮೊದಲು ಬೆಂಕಿ**

ಮೂಲತ: ಯಾವುದೇ ವಾಹನ ಅಪಘಾತವಾದಾಗ ತತಕ್ಷಣ ಡಿಸೆಲ್ ಟ್ಯಾಂಕಿಗೆ ಹೋಗಿ ಬೆಂಕಿ ಬೀಳುವುದೇ ಇಲ್ಲ. ಅದು ಬಲಿಯಾಗುವುದು ಮತ್ತು ತನ್ನ ಕೊಡುಗೆ ಸೇರಿಸುವುದು ತುಸು ಹೊತ್ತಿನ ನಂತರ. ಆದರೆ ಅದಾಗಲೇ ಹಿಂದಿನ ಭಾಗ ಮತ್ತು ಮುಂದಿನ ಭಾಗಕ್ಕೆ ಸಂಪರ್ಕವಾಗಿ ಕಾರ್ಯನಿರ್ವಹಿಸುವ ಹಲವಾರು ಶಾಫ್ಟ್ ಮತ್ತು ಕೇಬಲ್ ಟ್ರೇಗಳು ಬೆಂಕಿಯನ್ನು ಸುಲಭಕ್ಕೆ ದಾಟಿಸಲು ಕಾಯ್ದು ನಿಂತಿರುತ್ತವೆ. ಅದಕ್ಕೆ ಸರಿಯಾಗಿ ಲಗೇಜ್ ರೂಪ ದಲ್ಲಿ ಹೇರಿರುವ ವಸ್ತುಗಳಲ್ಲಿರುವ ದಹನಾನುಕೂಲಿ ವಸ್ತುಗಳು ಸರಕ್ಕನೆ ಬೆಂಕಿ ಕಚ್ಚಿ ಕೊಂಡು ಅದನ್ನು ಡಿಸೆಲ್ ಟ್ಯಾಂಕು ಮತ್ತು ಇತರ ಇಂಜಿನ್ ಆಯಿಲ್‌ವರೆಗೂ ಒಯ್ಯುತ್ತವೆ. ಇದೆಲ್ಲ ಮೊದಲೆ ಒಂದೆರಡು ಅಥವ ಹೆಚ್ಚೆಂದರೆ ಐದು ನಿಮಿಷದಲ್ಲಾಗುವ ಅಗ್ನಿ ಪಲ್ಲಟ. ಅಷ್ಟರಲ್ಲಿ ಬಾಗಿಲು ಜಾಮ್ ಆಗಿ ಲಾಕ್ ಆಗುತ್ತದೆ. ಗ್ಲಾಸು ಒಡೆಯಲು ಬರುವುದಿಲ್ಲ. ಅದು ಕೆಲವೊಮ್ಮೆ ಗಂಡಸರಿಗೂ ಆಗದಿರುವ ಕೆಲಸ! ಇನ್ನು ಮಕ್ಕಳು ಹೆಂಗಸರು ಎಲ್ಲಿಂದ ಸುತ್ತಿಗೆ ತಂದು ಕಿಟಕಿ ಹಾರಿ ಬದುಕು ಕಟ್ಟಿಕೊಂಡಾರು. ಮಾಡಿದರೂ ಪ್ಯಾಸೆಜ್‌ನಲ್ಲಿ ಎಲ್ಲರೂ ಒಮ್ಮೆ ತುಂಬಿಕೊಂಡು ತಳ್ಳಾಡುವಾಗ ಕೇವಲ ಆರೆಂಟು ಜನ ಹಾರಿಕೊಂಡಾರು.

ಅದರ ನಂತರ ಮತ್ತೊಂದು ಸಾಲು ಜಿಗಿಯುತ್ತದೆ ಎಂದಿಟ್ಟುಕೊಂಡರೂ ಎರಡನೆಯವರಿಗೆ ಶೇ.20 ಸುಡುವ ಗಾಯ ಖಂಡಿತ. ಆದರೆ ಆ ಹೊತ್ತಿಗೆ ಬೆಂಕಿಯ ಕೆನ್ನಾಲಿಗೆ ಮತ್ತು ಹೊಗೆ ಯಾವ ಪರಿ ಏರಿ ಬಿಡುತ್ತದೆ ಎಂದರೆ ಗೋಲ್ಡನ್ ಅರ್ವ ಮುಗಿದ ಅಪಾಯಕಾರಿ ಸಮಯದಲ್ಲಿ ಹೆಚ್ಚೆಂದರೆ ಬದುಕುವ ಅವಕಾಶ ಶೇ.ಒಂದು ಮಾತ್ರ.

ಕಾರಣ ಹೊರಕ್ಕೆ ಜಿಗಿದರೂ ಬೆಂಕಿಯ ಬಾಯಿಗೆ, ಅದರಲ್ಲೂ ಸುಡುವ ಚರ್ಮ ಲೆಕ್ಕಿಸದೆ ಆಚೆಗೆ ದೌಡಾಯಿಸಲು ನಾವೆಲ್ಲ ಏನು ಸಿನೇಮಾ ನಾಯಕರಾ? ಶ್ವಾಸಕೋಶದ ಹೊಗೆ ತುಂಬಿ ಉಸಿರು ಚೆಲ್ಲಿ ಅಲ್ಲೆ ಆಹುತಿ. ಮೇಲೂ ಕೆಳಗೂ ಇದ್ದ ಸರಂಜಾಮು ತಮ್ಮ ಕೆಲಸ ಮುಗಿಸುತ್ತವೆ. ದೂರದಲ್ಲಿ ನಿಂತವರು ವಿಡಿಯೋ ಮಡುತ್ತಿರುತ್ತಾರೆ. ರೋದನೆ ಮುಗಿಲು ಮುಟ್ಟುತ್ತದೆ.

**ಅನಧಿಕೃತ ಹೇರಿಕೆ**

ಡಿಸೆಲ್ ಟ್ಯಾಂಕ್ ನೀಡುವ ಕೊಡುಗೆ ಎಂದರೆ ಅದು ಕೊನೆಯ ಉರಿಗೆ ತನ್ನ ಕೊಡುಗೆ ನೀಡುತ್ತದೆ. ಅದಕ್ಕೂ ಮೊದಲೇ, ಹೇರಿರುವ ಸರಂಜಾಮು ನಮ್ಮನ್ನು ಮುಕ್ಕಾಲು ಭಾಗ ಉರಿಸಿ ಹಾಕಿರುತ್ತದೆ. ಈ ಅನಧಿಕೃತ ಹೇರಿಕೆಯ ಬಗ್ಗೆ ಒಬ್ಬರೂ ಉಸಿರೆತ್ತುತ್ತಿಲ್ಲ! ವಾಹನಗಳಲ್ಲಿ ದಹನಾನುಕೂಲಿ ವಸ್ತುಗಳ ಸಾಗಣೆ ನಡೆಯುತ್ತಿರುವುದು, ಅದೂ ತೀರ ಪಟಾಕಿ, ಬಾಂಬು, ಮದ್ದು ಇಂಥವೇ ಆಗಬೇಕೆಂದೇನಿಲ್ಲ. ಸಿಂಥೇಟಿಕ್ ಬಣ್ಣಗಳು, ಕೂದಲು, ರಾಸಾಯನಿಕ ಪದಾರ್ಥಗಳು (ಇವುಗಳಲ್ಲಿ ಪ್ರತಿಯೊಂದು ವಸ್ತುವು ಅದರದ್ದೇ ಆದ ಶೈಲಿಯಲ್ಲಿ ದಹನಾನು ಕೂಲಿ ಎನ್ನುವುದನ್ನು ಗಮನಿಸಬೇಕು) ಪಾಲಿಯೆಸ್ಟರ್ ಬಟ್ಟೆಗಳ ಬಾಕ್ಸುಗಳು, ಇಲೆಕ್ಟ್ರಿಕಲ್ ಕೇಬಲ್ ಬಂಡಲ್‌ಗಳು, ಪ್ಲಾಸ್ಟಿಕ್ ಸುರುಳಿಗಳು, ಒಣ ಪದಾರ್ಥಗಳ ರಟ್ಟಿನ ಪೆಟ್ಟಿಗೆಗಳು, ಇವನ್ನೆಲ್ಲ ಅವರಿಸಿರುವ ಪ್ಯಾಕಿಂಗ್ ಮೆಟೀರಿಯಲ್ಲು ಬೆಂಕಿಗೆ ತುಪ್ಪ ಸುರಿಯುವ ಪದಾರ್ಥಗಳೆ.



ಇನ್ನೊಂದೆಂದರೆ, ಅಪಘಾತವಾಗುತ್ತಲೇ ಕಿಟಕಿ ಗ್ಲಾಸ್ ಒಡೆಯುವುದಂತೂ ಸಾಧ್ಯವೇ ಇರುವುದಿಲ್ಲ. ಎಂಜಿನ್ ಆಫ್ ಆಗುತ್ತಲೇ, ಇಂದಿನ ತಂತ್ರಜ್ಞಾನ ಕೈಕೊಡುವುದರಿಂದ, ಮುಖ್ಯ ಬಾಗಿಲು ಆಟೋ ಲಾಕ್ ಆಗುವುದರಿಂದ ಪ್ರಯಾಣಿಕರಿಗೆ ಉಳಿಯುವ ಏಕೈಕ ದಾರಿ ಗಾಜು ಒಡೆಯುವುದೆ. ಆದರೆ ಅದಕ್ಕೆ ಬೇಕಾದ ಸಲಕರಣೆ ಇರುತ್ತದೇಯೇ? ಇದರ ಜೊತೆಗೆ ಬಸ್ ಆಪರೇಟರ್‌ಗಳು ಹಣಕ್ಕಾಗಿ ಕಂಡು ಕೊಂಡಿರುವ ಇನ್ನೊಂದು ಮಾರ್ಗ ರಜಾವಧಿಯಲ್ಲಿ ರೇಟನ್ನು ಬೇಕಾಬಿಟ್ಟಿ ಏರಿಸುವುದು. ಒಬ್ಬೊಬರೇ ಮಲಗುವ ಆಸನಕ್ಕೆ ಶೇ.20 ಜಾಸ್ತಿ.

ಕೆಳಗಾದರೆ ಮತ್ತೇ ಶೇ.10 ಜಾಸ್ತಿ. ಅರೆ ಇದೇನಿದು? ಒಂದೇ ಬಸ್ಸು ಒಂದರೆ ದಾರಿ.. ರಹೇವಾರಿ ರೇಟು... ಮೈಯೆಲ್ಲಾ ಉರಿದುಕೊಳುವ ಪ್ರಯಾಣಿಕ ಮಾತ್ರ ದವಡೆ ಕಚ್ಚಿಕೊಂಡು ಕುಳಿತಿರುತ್ತಾನೆ. ಇನ್ನು ಬ್ಯಾಗೇಜ್ ಚಾರ್ಜು ಎಂದು, ಬ್ಯಾಗನ್ನು ಕೆಳಗಿನ ಅರೆಯಲ್ಲಿಡಲು ಪ್ರತಿ ಬ್ಯಾಗಿಗೆ 10 ರೂಪಾಯಿ ಕೊಡಬೇಕು. ಕೊಡುವ ಬೆಡ್‌ಶೀಟ್‌ಗಳು ಕನಿಷ್ಟ ನಾಲ್ಕಾರು ಬಾರಿ ಉಪಯೋಗಿಸಿದ್ದು!

ಇಷ್ಟೆಲ್ಲಾ ಲಾಭದತ್ತಲೆ ದೃಷ್ಟಿ ನೆಡುವ ಬಸ್‌ಗಳು, ಪ್ರಯಾಣಿಕರ ಸುರಕ್ಷತೆಯತ್ತ ಯಾವ ಗಮನ ನೀಡುತ್ತದೆ? ಉತ್ತರ ಸೊನ್ನೆ. ಪ್ರತಿ ಬಸ್‌ಗೆ ಸ್ವಯಂ ಚಾಲಿತ ಅಗ್ನಿ ಸುರಕ್ಷಾ ವ್ಯವಸ್ಥೆ ಕೊಡದೆ ಹೋದರೆ, ವರ್ಷಕ್ಕೊಮ್ಮೆ ಒಂದೆರಡು ಡಜನ್ ಲೆಕ್ಕದಲ್ಲಿ ಜೀವ ಆಹುತಿ ಪಕ್ಕ. ಎರಡು ದಿನ ಮಾಧ್ಯಮಗಳು ಬಾಯಿ ಬಡಿದುಕೊಂಡು ಸುಮ್ಮನಾಗುತ್ತವೆ. ಮುಂದೆ ಮತ್ತೊಂದು ಬಸ್ ಆಹುತಿಯಾಗುವವರೆಗೆ.

# ಕುವೆಂಪು ವಿಶ್ವಮಾನವ ಸಂದೇಶ ಇಂದಿಗೂ ಜೀವಂತ

- **ಅಖಂಡತೆಯ ದರ್ಶನ: ಕುವೆಂಪು ಮತ್ತು ವಿಶ್ವಮಾನವ ಪ್ರಜ್ಞೆಯ ಪುನರುತ್ಥಾನ**
- **ನೆನ್ನೆ ರಾಷ್ಟ್ರ ಕವಿ ಕುವೆಂಪು ಜನ್ಮದಿನ ಕುವೆಂಪು ವಿಶ್ವ ಮಾನವ ಸಂದೇಶ ಇಂದಿಗೂ ಜೀವಂತ**
- **ಶಿರಸಿ: ಕನ್ನಡ ಸಾಹಿತ್ಯ ಚರಿತ್ರೆಯ ಶಿಖರಪ್ರಾಯ ವ್ಯಕ್ತಿತ್ವ, ಯುಗದ ಕವಿ ಜಗದ ಗುರು ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವು ಕೇವಲ ಒಂದು ದಿನಾಂಕವಲ್ಲ; ಅದು ಪ್ರತಿಯೊಬ್ಬ ಮನುಷ್ಯನ ಅಂತರಂಗವನ್ನು ಬಡಿದೆಬ್ಬಿಸುವ ವೈಚಾರಿಕ ಜಾಗೃತಿಯ ದಿನ.**

- **ಯುವಜನತೆಗೆ ಕುವೆಂಪು ನೀಡಿದ ಅತ್ಯಂತ ಪ್ರಬಲ ಕರೆ ಎಂದರೆ ನಿರಂಕುಶಮತಿಗಳಾಗಿ. ಪರಂಪರೆಯ ಹೆಸರಿನಲ್ಲಿ ಬರುವ ಮೌಢ್ಯಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ ಎಂಬುದು ಅವರ ಆಶಯವಾಗಿತ್ತು. ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ ಅವರು, ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಗುಲಾಮಗಿರಿಗೆ ಒಪ್ಪಿಸಬಾರದೆಂದು ಪ್ರತಿಪಾದಿಸಿದರು. ಅವರ ದೃಷ್ಟಿಯಲ್ಲಿ ಭಕ್ತಿ ಎನ್ನುವುದು ಮೂಢನಂಬಿಕೆಯಲ್ಲ, ಅದು ವಿಶ್ವಚೇತನದೊಂದಿಗಿನ ಅನುಸಂಧಾನ.**

ಡಿಸೆಂಬರ್ 29 ಅನ್ನು ವಿಶ್ವಮಾನವ ದಿನ ಎಂದು ಆಚರಿಸುವ ಮೂಲಕ ಕರ್ನಾಟಕವು ಜಗತ್ತಿಗೆ ಒಂದು ಶ್ರೇಷ್ಠ ಜೀವನ ದರ್ಶನವನ್ನು ಪರಿಚಯಿಸುತ್ತಿದೆ. ಕುವೆಂಪು ಅವರ ಇಡೀ ಸಾಹಿತ್ಯದ ಸಾರ ಇರುವುದು ಅನಿಕೇತನ ಭಾವದಲ್ಲಿ. ನೂರು ಮತದ ಹೊಟ್ಟೆ ತೂರಿ, ಎಲ್ಲ ತತ್ತ್ವದೆಲ್ಲೆ ಮೀರಿ ಬೆಳೆಯುವ ಚೇತನವೇ ವಿಶ್ವಮಾನವ ಚೇತನ. ಮಗು ಹುಟ್ಟುವಾಗ ವಿಶ್ವಮಾನವನಾಗಿರುತ್ತದೆ, ಆದರೆ ಸಮಾಜವು ಅದಕ್ಕೆ ಧರ್ಮ, ಜಾತಿ ಮತ್ತು ಪ್ರಾದೇಶಿಕತೆಯ ಅಲ್ಪ ಗಡಿಗಳನ್ನು ನಿರ್ಮಿಸಿ ಬಂಧಿಸಿ ಬಿಡುತ್ತದೆ.

ಈ ಸಂಕುಚಿತತೆಯ ಸಂಕೋಲೆಗಳನ್ನು ಕಳಚಿಕೊಂಡು ಮತ್ತೆ ವಿಶ್ವಮಾನವನಾಗುವುದೇ ಜೀವನದ ಪರಮ ಗುರಿ ಎಂಬುದು ಕುವೆಂಪು ಅವರ ಸಂದೇಶವಾಗಿತ್ತು. ಮನುಜಮತ ಮತ್ತು ಸಮನ್ವಯದ ಹಾದಿ ಇಂದಿನ ಧ್ರುವೀಕೃತ ಜಗತ್ತಿನಲ್ಲಿ, ಧರ್ಮ ಮತ್ತು ವಿಜ್ಞಾನದ ನಡುವೆ ಸಂಘರ್ಷ ನಡೆಯುತ್ತಿರುವಾಗ ಕುವೆಂಪು ಅವರ ಪೂರ್ಣದೃಷ್ಟಿ ನಮಗೆ ದಾರಿದೀಪವಾಗಿದೆ.

ಅವರು ವಿಜ್ಞಾನವನ್ನು ವಿರೋಧಿಸಲಿಲ್ಲ, ಬದಲಿಗೆ ವಿಜ್ಞಾನಕ್ಕೆ ಆಧ್ಯಾತ್ಮದ ಕಣ್ಣು ಬೇಕು ಎಂದರು. ಅವರ ಪಂಚಮಂತ್ರಗಳಾದ ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಗಳು ಕೇವಲ ಘೋಷಣೆಗಳಲ್ಲ; ಅವು ನಾಗರಿಕ ಸಮಾಜವೊಂದು ಪಾಲಿಸಬೇಕಾದ ಸಾಂವಿಧಾನಿಕ ಮೌಲ್ಯಗಳೂ ಹೌದು.

**ನಿರಂಕುಶಮತಿಗಳಾಗುವ ಅನಿವಾರ್ಯತೆ:** ಯುವಜನತೆಗೆ ಕುವೆಂಪು ನೀಡಿದ ಅತ್ಯಂತ ಪ್ರಬಲ ಕರೆ ಎಂದರೆ ನಿರಂಕುಶಮತಿಗಳಾಗಿ. ಪರಂಪರೆಯ ಹೆಸರಿನಲ್ಲಿ ಬರುವ ಮೌಢ್ಯಗಳನ್ನು ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ ಎಂಬುದು ಅವರ ಆಶಯವಾಗಿತ್ತು. ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ ಅವರು, ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಗುಲಾಮಗಿರಿಗೆ ಒಪ್ಪಿಸಬಾರದೆಂದು ಪ್ರತಿಪಾದಿಸಿದರು. ಅವರ ದೃಷ್ಟಿಯಲ್ಲಿ ಭಕ್ತಿ ಎನ್ನುವುದು ಮೂಢನಂಬಿಕೆಯಲ್ಲ, ಅದು ವಿಶ್ವಚೇತನದೊಂದಿಗಿನ ಅನು ಸಂಧಾನ.

**ಕನ್ನಡದ ಮೂಲಕ ಜಾಗತಿಕ ವಿಸ್ತಾರ:** ಕುವೆಂಪು ಅವರು ಕನ್ನಡ ಭಾಷೆಯನ್ನು ಎಷ್ಟು ಪ್ರೀತಿಸುತ್ತಿದ್ದರೋ, ಅಷ್ಟೇ ಪ್ರೇಮದಿಂದ ವಿಶ್ವ ಸಾಹಿತ್ಯವನ್ನೂ ಅಪ್ಪಿಕೊಂಡಿದ್ದರು. ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿ ಅವರು ಕಟ್ಟಿಕೊಟ್ಟ ರಾಮ ಕೇವಲ ಒಬ್ಬ ವ್ಯಕ್ತಿಯಲ್ಲ, ಅವನು ವಿಶ್ವ ಚೇತನದ ಸಂಕೇತ. ಮಲೆನಾಡಿನ ಹಸಿರು ಕಾನನದಲ್ಲಿ ಕುಳಿತು ಜಗತ್ತಿನ ಪರಮ ಸತ್ಯಗಳನ್ನು ದರ್ಶಿಸಿದ ಈ ಕವಿ, ಪ್ರಾದೇಶಿಕತೆಯ ಮೂಲಕವೇ ಜಾಗತಿಕತೆಯನ್ನು ತಲುಪಬಹುದು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ.



**ಸರ್ವಜನಾಂಗದ ಶಾಂತಿಯ ತೋಟ:** ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ ಎಂದು ಹಾಡಿದ ಕವಿ, ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟ ಎಂದು ಬಣ್ಣಿಸಿದರು. ಇಲ್ಲಿ ಶಾಂತಿ ಎಂದರೆ ಕೇವಲ ಅಹಿಂಸೆಯಲ್ಲ, ಅದು ಪರಸ್ಪರರ ಅಸ್ತಿತ್ವವನ್ನು ಗೌರವಿಸುವ ಉದಾತ್ತತೆ. ಜಾತಿ ರಾಜಕಾರಣ ಮತ್ತು ಧಾರ್ಮಿಕ ಅಸಹಿಷ್ಣುತೆ ಹೆಚ್ಚುತ್ತಿರುವ ಈ ಹೊತ್ತಿನಲ್ಲಿ, ಕುವೆಂಪು ಅವರ ಈ ಮಾತುಗಳು ಕೇವಲ ಸಾಲುಗಳಾಗಿ ಉಳಿಯದೆ ಅನ್ವಯಿಕ ಶಕ್ತಿಯಾಗಬೇಕಿದೆ. ವಿಶ್ವಮಾನವ ದಿನವೆಂದರೆ ಕೇವಲ ಕುವೆಂಪು ಅವರನ್ನು ಸ್ಮರಿಸುವುದಲ್ಲ; ನಮ್ಮೊಳಗಿನ ಸಂಕುಚಿತತೆಯನ್ನು ದಹಿಸಿ, ಮನುಷ್ಯ ಪ್ರೇಮದ ಹಣತೆಯನ್ನು ಹಚ್ಚುವುದು. ಮನುಷ್ಯಜಾತಿ ತಾನೊಂದೆ ವಲಂ ಎಂಬ ಸತ್ಯವನ್ನು ಅರಿತು, ಬೇಲಿಗಳಿಲ್ಲದ ಲೋಕದತ್ತ ಹೆಜ್ಜೆ ಹಾಕುವುದೆ ಕುವೆಂಪು ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ. ಅವರೇ ಹೇಳಿದಂತೆ - ಮತ್ತೆ ಮನುಷ್ಯನಾಗೋಣ, ವಿಶ್ವ ಮಾನವನಾಗೋಣ.

**ವಿಶೇಷ ಹೂರಣಗಳು: ವಿಚಾರ: ವಿಚಾರ ಕ್ರಾಂತಿ ಮತ್ತು ಮೌಢ್ಯ ವಿರೋಧಿ ನಿಲುವು.**

**ಸಂದೇಶ: ಅನಿಕೇತನ ಭಾವ ಮತ್ತು ವಿಶ್ವಪ್ರೇಮ.**

**ಗುರಿ: ಮನುಷ್ಯನನ್ನು ಜಾತೀಯತೆಯಿಂದ ಬಿಡುಗಡೆಗೊಳಿಸುವುದು.**

**ಮನುಷ್ಯ ಪ್ರೇಮದ ಹಣತೆಯನ್ನ ಹಚ್ಚಬೇಕು:** ವಿಶ್ವಮಾನವ ದಿನವೆಂದರೆ ಕೇವಲ ಕುವೆಂಪು ಅವರನ್ನು ಸ್ಮರಿಸುವುದಲ್ಲ; ನಮ್ಮೊಳಗಿನ ಸಂಕುಚಿತತೆಯನ್ನು ದಹಿಸಿ, ಮನುಷ್ಯ ಪ್ರೇಮದ ಹಣತೆಯನ್ನು ಹಚ್ಚುವುದು. ಮನುಷ್ಯಜಾತಿ ತಾನೊಂದೆ ವಲಂ ಎಂಬ ಸತ್ಯವನ್ನು ಅರಿತು, ಬೇಲಿಗಳಿಲ್ಲದ ಲೋಕದತ್ತ ಹೆಜ್ಜೆ ಹಾಕುವುದೆ ಕುವೆಂಪು ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ. ಅವರೇ ಹೇಳಿದಂತೆ - ಮತ್ತೆ ಮನುಷ್ಯನಾಗೋಣ, ವಿಶ್ವ ಮಾನವನಾಗೋಣ.

**- ವಿನುತಾ** ಹೆಗಡೆ

### ಕನ್ನಡದ ಅಸ್ಮಿತೆಯನ್ನು ಜಾಗೃತಗೊಳಿಸುವ ಕುವೆಂಪು ಅವರ ಅಮರವಾಣಿಗಳು

- ★. ಕನ್ನಡವೇ ಸತ್ಯ ಕನ್ನಡವೇ ನಿತ್ಯ; ಹಸಿರಾಗಿರಲಿ ಕನ್ನಡದ ಒಸಗೆ ನಮ್ಮೆಲ್ಲರ ಎದೆಯಲಿ.
- ★. ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು.
- ★. ಕನ್ನಡ ಎನ್ನುವುದು ಕೇವಲ ಭಾಷೆಯಲ್ಲ, ಅದು ನಮ್ಮ ಸಂಸ್ಕೃತಿಯ ಉಸಿರು.
- ★. ಕನ್ನಡಕ್ಕಾಗಿ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು; ಕನ್ನಡಕ್ಕಾಗಿ ಧ್ವನಿ ಎತ್ತು, ಅದು ಪಾಂಚಜನ್ಯವಾಗುವುದು!
- ★. ಬೇರೆ ಭಾಷೆಗಳನ್ನು ಗೌರವಿಸು, ಆದರೆ ನಿನ್ನ ಮಾತೃಭಾಷೆಯಾದ ಕನ್ನಡವನ್ನು ಮಾತ್ರ ಆರಾಧಿಸು.
- ★. ಮನೆಯಲ್ಲಿ ಕನ್ನಡ, ಮನದಲ್ಲಿ ಕನ್ನಡ; ಬದುಕಿನ ಪ್ರತಿ ಹೆಜ್ಜೆಯಲ್ಲೂ ಮಿಡಿಯಲಿ ಕನ್ನಡ.

### ಜಾತಿ-ಮತಗಳ ಗಡಿ ದಾಟಿ ಮನುಷ್ಯ ಮನುಷ್ಯನಾಗುವ ಸಂದೇಶ

- ★. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ-ಇದುವೇ ಜೀವನದ ಪರಮ ಗುರಿ.
- ★. ಹುಟ್ಟುವಾಗ ಪ್ರತಿಯೊಂದು ಮಗುವು ವಿಶ್ವಮಾನವ; ಬೆಳೆಯುತ್ತಾ ನಾವು ಅದನ್ನು ಅಲ್ಪಮಾನವನನ್ನಾಗಿ ಮಾಡುತ್ತೇವೆ.
- ★. ಮನುಷ್ಯ ಮನುಷ್ಯನಾಗಿ ಬದುಕುವುದೇ ಧಮ; ಜಾತಿ-ಮತಗಳ ಹೆಸರಲ್ಲಿ ಹಗೆತನ ಸಾಧಿಸುವುದು ಅಧರ್ಮ.
- ★. ಮತಗಳ ಗೋಡೆಗಳನ್ನು ಕೆಡವಿ, ಮನುಷ್ಯತ್ವದ ಸೇತುವೆಯನ್ನು ನಿರ್ಮಿಸೋಣ.
- ★. ಜಗತ್ತಿನ ಸರ್ವ ಜೀವರಾಶಿಗಳ ಸುಖವೇ ನಮ್ಮ ಸುಖವಾಗಲಿ; ಅದುವೇ ನಿಜವಾದ ವಿಶ್ವಮಾನವತ್ವ.

### ವಿದ್ಯಾರ್ಥಿಗಳಿಗೆ ಮತ್ತು ಜ್ಞಾನಾರ್ಥಿಗಳಿಗೆ ಸ್ಫೂರ್ತಿದಾಯಕ ನುಡಿಗಳು

- ★. ಅರಿವೇ ಗುರು, ಅರಿವೇ ದೈವ; ಶ್ರದ್ಧೆಯಿಲ್ಲದ ಶಿಕ್ಷಣ ಕೇವಲ ಅಕ್ಷರಗಳ ಹೊರೆ.
- ★. ಶಿಕ್ಷಣ ಎಂದರೆ ಕೇವಲ ಪದವಿ ಪಡೆಯುವುದಲ್ಲ, ಅದು ವ್ಯಕ್ತಿತ್ವದ ವಿಕಸನ ಮತ್ತು ಚಾರಿತ್ರ್ಯದ ನಿಮಾಣ.
- ★. ಪುಸ್ತಕದ ಜ್ಞಾನದ ಜೊತೆಗೆ ಲೋಕದ ಅನುಭವವೂ ಸೇರಿದಾಗ ಮಾತ್ರ ಮನುಷ್ಯ ಜ್ಞಾನಿಯಾಗುತ್ತಾನೆ.
- ★. ಕಲಿಯುವುದನ್ನು ನಿಲ್ಲಿಸಬೇಡ, ಏಕೆಂದರೆ ಜೀವನವು ಕಲಿಸುವುದನ್ನು ಎಂದಿಗೂ ನಿಲ್ಲಿಸುವುದಿಲ್ಲ.

# ಪೆಟ್ರೋಲ್ ಬಂಕ್‌ಗಳಲ್ಲಿ ಸಾರ್ವಜನಿಕರಿಗೆ ಉಚಿತ ಸೌಲಭ್ಯ ಒದಗಿಸಿ: ಜಿಲ್ಲಾಧಿಕಾರಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಉಚಿತ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಕಡ್ಡಾಯವಾಗಿ ಒದಗಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.

ವಾಹನದ ಟೈರ್‌ಗಳಿಗೆ ಉಚಿತ ಗಾಳಿಯ ಸೌಲಭ್ಯ, ಪೆಟ್ರೋಲ್ ಬಂಕ್ ಆವರಣದಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಗ್ರಾಹಕರು ಮತ್ತು ಸಿಬ್ಬಂದಿ ಇಬ್ಬರಿಗೂ ಶೌಚಾಲಯ ಸೌಲಭ್ಯಗಳು, ತುರ್ತು ಸಂದರ್ಭಗಳಲ್ಲಿ ಪ್ರಥಮ ಚಿಕಿತ್ಸಾ ಕಿಟ್‌ಗಳ ಸೌಲಭ್ಯಗಳು, ಗ್ರಾಹಕರು ನಿಖರವಾದ ಇಂಧನವನ್ನು ಪಡೆಯುವಲ್ಲಿ ಪೆಟ್ರೋಲ್ ಬಂಕ್ ಸಿಬ್ಬಂದಿ ಸಹಕರಿಸುವುದು ಹಾಗೂ ಪೆಟ್ರೋಲ್ ಮತ್ತು ಡೀಸೆಲ್‌ನ ಗುಣಮಟ್ಟದ ಕುರಿತು ಗ್ರಾಹಕರಿಗೆ ಮಾಹಿತಿ ಒದಗಿಸುವುದು. ಪೆಟ್ರೋಲ್ ಬಂಕ್ ಆವರಣದಲ್ಲಿ ತುರ್ತು ಸಂಪರ್ಕ ಸಂಖ್ಯೆಗಳನ್ನು ಗ್ರಾಹಕರಿಗೆ ಕಾಣುವಂತೆ ಸ್ಪಷ್ಟ ಪ್ರದರ್ಶನ ಮಾಡುವಂತೆ ಅವರು ತಿಳಿಸಿದ್ದಾರೆ.



ಪೆಟ್ರೋಲ್ ಬಂಕ್‌ಗಳಲ್ಲಿ ಸದರಿ ಮೂಲ ಸೌಕರ್ಯಗಳ ಕೊರತೆ ಕಂಡು ಬಂದಲ್ಲಿ ಗ್ರಾಹಕರು ಅಧಿಕಾರಿಗಳಿಗೆ ದೂರು ನೀಡಬಹುದಾಗಿದೆ.

ಸೇಲ್ಸ್ ಆಫೀಸರ್, ಇಂಡಿಯನ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್., ಹಾಸನ 7022945432, ಸೇಲ್ಸ್ ಆಫೀಸರ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್, ಹಾಸನ 7033096059, ಸೇಲ್ಸ್ ಆಫೀಸರ್, ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್, ಹಾಸನ. ದೂ.ಸಂಖ್ಯೆ: 9188692387 ಗೆ ದೂರು ನೀಡಲು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

# ರಸ್ತೆಗಳ ಸಂರಕ್ಷಣೆಗೆ ಕ್ರಮ ವಹಿಸಿ

## ಒತ್ತುವರಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಿ: ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿರುವ ಎಲ್ಲಾ ರಸ್ತೆಗಳನ್ನು ಸಂರಕ್ಷಣೆ ಮಾಡುವ ಸಂಬಂಧ ರಸ್ತೆ ಒತ್ತುವರಿಯನ್ನು ಗುರುತಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಗತ್ಯವಿರುವ ಕಡೆಗಳಲ್ಲಿ ಉಬ್ಬು ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಜೊತೆಗೆ ಒತ್ತುವರಿ ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ರಸ್ತೆ ಬದಿಯಲ್ಲಿ ಕಸವಿಲೇವಾರಿ ಮಾಡುವುದನ್ನು ತೆರವಿಗಾಗಿ ಅಭಿಯಾನದ ಮೂಲಕ ಕ್ರಮ ವಹಿಸಬೇಕು ಎಂದರು.

ಪಾದಚಾರಿ ಸಂಚಾರಕ್ಕೆ ಮೀಸಲಿಟ್ಟಿರುವ ಸ್ಥಳದಲ್ಲಿ ವ್ಯಾಪಾರ ನಡೆಸುತ್ತಿದ್ದಾರೆ ಇದರಿಂದ ಪಾದಾಚಾರಿಗಳು ಓಡಾಡಲು ಸ್ಥಳವಿಲ್ಲದೆ ರಸ್ತೆಯಲ್ಲಿ ಸಂಚಾರ ಮಾಡುತ್ತಿರುವುದರಿಂದ ಹಿಟ್ ಅಂಡ್ ರನ್ ಪ್ರಕರಣಕ್ಕೆ ಕಾರಣವಾಗುತ್ತದೆ. ಈ ನಿಟ್ಟಿನಲ್ಲಿ ಪಾದಚಾರಿಗಳು ಓಡಾಡಲು ಇರುವ ಸ್ಥಳದಲ್ಲಿ ವ್ಯಾಪಾರ ನಡೆಸುತ್ತಿರುವುದನ್ನು ತೆರವು ಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದರು.




ಸಿಸಿ.ಟಿ.ವಿ ಅಳವಡಿಸಿದರೆ ಕಸ ಬಿಸಾಕುವುದನ್ನು ಪತ್ತೆಹಚ್ಚಲು ಹಾಗೂ ಬೀದಿ ನಾಯಿಗಳ ಹಾವಳಿಯಿಂದ ಸಂಭವಿಸುವ ಅವಘಡಗಳ ತಡೆಗೆ ಕ್ರಮವಹಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರಲ್ಲದೆ, ರಿಫ್ಲೆಕ್ಟರ್, ಕ್ಯಾಟ್ ಐಸ್ ಅಳವಡಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ತಿಳಿಸಿದರಲ್ಲದೆ, ರಸ್ತೆ ಸುರಕ್ಷತೆಗಾಗಿ ಅಭಿಯಾನದ ಮೂಲಕ ಕ್ರಮವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳ ಹಾವಳಿ ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಬೇಲೂರಿನಲ್ಲಿ ಟ್ರಾಫಿಕ್ ಲೈಟ್ ಅಳವಡಿಸಲು ಕ್ರಮಕೈಗೊಳ್ಳಲು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿಗೆ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಗಿರೀಶ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್, ಎನ್.ಹೆಚ್.ಎ.ಐ. ಯೋಜನಾ ನಿರ್ದೇಶಕ ಸೈಯದ್ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.


# ಜ.1 ರಂದು ಜಕಣಾಚಾರಿ ಸಂಸ್ಮರಣಾ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಡಳಿತ ಹಾಸನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಸನ ಇವರ ಸಹಯೋಗದಲ್ಲಿ ವಿಶ್ವಕರ್ಮ ಶ್ರೀ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಜ.1 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಕಂದಾಯ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕರು ಹಾಗೂ ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ಇರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರುಗಳಾದ ಹೆಚ್.ಡಿ.ರೇವಣ್ಣ, ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರಾದ ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ಸೂರಜ್ ರೇವಣ್ಣ ಅವರು ಭಾಗವಹಿಸಲಿದ್ದಾರೆ.



ಹಾಸನ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ವಿಜಯ್ ಅಂಗಡಿ ಉಪನ್ಯಾಸ ನೀಡಲಿದ್ದಾರೆ.

# ಶ್ರೀ ಬನಶಂಕರಿ ಅಮ್ಮನವರ ಜಾತ್ರಾ ಮಹೋತ್ಸವ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಮಗ್ಗೆ-ರಾಯರ ಕೊಪ್ಪಲು ರಸ್ತೆ ವೈ.ಎನ್.ಪುರ ಗ್ರಾಮದಲ್ಲಿರುವ ಶ್ರೀ ಬನಶಂಕರಿ ಅಮ್ಮನವರ ಜಾತ್ರಾ ಮಹೋತ್ಸವವು ಡಿ.28 ರಿಂದ ಆರಂಭವಾಗಿದ್ದು, ಜ.3 ರವರೆಗೂ ನಡೆಯಲಿದೆ.

ಡಿ. 28 ಭಾನುವಾರ ಬೆಳಿಗ್ಗೆ ಪುಷ್ಯ ಶುದ್ಧ ಅಷ್ಟಮಿ ಉಪರಿ ನವಮಿ ಅಂಗವಾಗಿ ಶ್ರೀ ಅಮ್ಮನವರಿಗೆ ಸುಪ್ರಭಾತ ಸೇವೆ, ವಿಶೇಷ ಪಂಚಾಮೃತ ಅಭಿಷೇಕ ನಡೆಯಿತು. ಸಂಜೆ 6 ಗಂಟೆಗೆ ಧ್ವಜಾರೋಹಣ ನೆರವೇರಿಸಿ ಸಂಪನ್ನಗೊಳಿಸಲಾಯಿತು.

ಡಿ.29 ಸೋಮವಾರ ಪುಷ್ಯ ಶುದ್ಧ ದಶಮಿ ಬೆಳಿಗ್ಗೆ ಶ್ರೀ ಅಮ್ಮನವರಿಗೆ ವಿಶೇಷ ಅಭಿಷೇಕ ನಡೆಯಿತು.

ಡಿ.30 ರಂದು ಪುಷ್ಯ ಶುದ್ಧ ವೈಕುಂಠ ಏಕಾದಶಿ ಸಂಜೆ 4ಗಂಟೆಗೆ ಗೋಪೂಜೆ, ಗಂಗಾಪೂಜೆ, ಮೂಲ ದೇವರ ಅನುಜ್ಞೆ, ಯೋಗಶಾಲೆ ಪ್ರವೇಶ, ಗಣಪತಿ ಪೂಜೆ, ಕಲಶ ಸ್ಥಾಪನೆ, ರಕ್ಷಾಬಂಧನ, ಯತ್ವಿಗುರು, ಮೃತಿಕಾ, ಸಂಗ್ರಹ ಅಂತರೋಹಣ ಅಗ್ನಿಸ್ಥಾಪನೆ ವಾಸ್ತು ಬಲಿ ಪ್ರಾಣರೋತ್ಸವ ಅಷ್ಟಾದಿಕಲ್ಪಿಕಾ ಬಲಿ ನಡೆಯಲಿದೆ.



ಡಿ.31 ರಂದು ಪುಷ್ಯ, ಶುದ್ಧ, ದ್ವಾದಶಿ, ಸಹಸ್ರ, ಮೋದಕ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಸ್ಕಂದ ಸೇವೆ ನಡೆಯಲಿದೆ.

2016. ಜ.1 ರಂದು ಪುಷ್ಯ, ಶುದ್ಧ, ಪ್ರಯೋಧಸಿ, ಬೆಳಿಗ್ಗೆ 6 ಗಂಟೆಗೆ ರುದ್ರಹೋಮ, 10 ಗಂಟೆಗೆ ಗಿರಿಜಾಶಂಕರ ಕಲ್ಯಾಣೋತ್ಸವ ನಡೆಯಲಿದೆ. ಜ. 2 ಶುಕ್ರವಾರ ಖುಷಿಯ ಶುದ್ರ ಚತುರ್ದಶಿ ಬೆಳಿಗ್ಗೆ 6 ಗಂಟೆಯಿಂದ ಚಂಡಿಕಾಯಾಗ, ಸಂಜೆ 6 ಗಂಟೆಗೆ ದುರ್ಗಾದೀಪ ನಮಸ್ಕಾರ ನಡೆಯಲಿದೆ. ಜ.3 ಶನಿವಾರ ಪುಷ್ಯ, ಬನದ ಹುಣ್ಣಿಮೆ, ಮಧ್ಯಾಹ್ನ 1.10 ರಿಂದ 1.40 ರೊಳಗೆ ಸಲುವ ಶುಭ ಮೇಷ ಲಗ್ನದಲ್ಲಿ ಬ್ರಹ್ಮರಥೋತ್ಸವ ಮತ್ತು ಅನ್ನ ಸಂತರ್ಪಣೆ, ಸಂಜೆ 7:30 ಗಂಟೆಗೆ ಉಯ್ಯಾಲೋತ್ಸವ ರಾತ್ರಿ 8.30 ಕ್ಕೆ ಶಯನೋತ್ಸವ ಕಾರ್ಯಕ್ರಮವಿರುತ್ತದೆ.

# ಹಿರಿಯರು ತಮ್ಮ ಅನುಭವ, ನೈತಿಕ ಮೌಲ್ಯಗಳನ್ನು ಧಾರೆ ಎರೆಯಬೇಕು

## ಹಿರಿಯರು ಸಮಾಜದ ಅಮೂಲ್ಯ ಆಸ್ತಿ: ಡಾ.ಹಂಪನಹಳ್ಳಿ ತಿಮ್ಮೇಗೌಡ

• ಪ್ರಜೋದಯ ವರದಿ

**ಹಾಸನ:** ಹಿರಿಯರು ಬದುಕಿದ ರೀತಿ ಮತ್ತು ಅವರ ಅನುಭವ, ಜ್ಞಾನ ಸಮಾಜಕ್ಕೆ ಅತ್ಯಮೂಲ್ಯ ಆಸ್ತಿ, ಈ ಹಿರಿಯರು ತಮ್ಮ ಅನುಭವ, ನೈತಿಕ ಮೌಲ್ಯಗಳು, ಸಂಸ್ಕಾರದ ಮಾತುಗಳನ್ನು ಇಂದಿನ ಯುವ ಪೀಳಿಗೆಗೆ ಧಾರೆ ಎರೆಯಬೇಕೆಂದು ಖ್ಯಾತ ಜಾನಪದ ಸಾಹಿತಿ ಡಾ.ಹಂಪನಹಳ್ಳಿ ತಿಮ್ಮೇಗೌಡ ಅವರು ತಿಳಿಸಿದರು.

ತಾಲ್ಲೂಕಿನ ಶಾಂತಿಗ್ರಾಮ ಹಳೆಯ ಶಾಲಾ-ಕಾಲೇಜು ವಿದ್ಯಾರ್ಥಿ ಸಂಘವು ಭಾನುವಾರ ಏರ್ಪಡಿಸಿದ್ದ ಹಿರಿಯ ನಾಗರಿಕರನ್ನು ಸನ್ಮಾನಿಸುವ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ವಾವಲಂಬಿ ಬದುಕು ಕಟ್ಟಿ ಕೊಳ್ಳುವ ಧಾವಂತದಲ್ಲಿ ಇಂದಿನ ಯುವಕರು ಹಿರಿಯರನ್ನು ಮರೆಯುತ್ತಿದ್ದಾರೆ.



ಅವರನ್ನು ಅಲಕ್ಷಿಸದೆ ಗೌರವವಾಗಿ ಕಾಣಬೇಕೆಂದು ಕರೆ ನೀಡಿದರು.

ಹಾಸನ ಜಿಲ್ಲೆ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಹಿರಿಯರ ಮಾರ್ಗದರ್ಶನ ಉತ್ತಮ ಸಮಾಜ ನಿರ್ಮಾಣಕ್ಕೆ ಪ್ರೇರಣೆ ಆಗಲಿದೆ. ಹಿರಿಯರನ್ನು ಪ್ರೀತಿ, ಗೌರವ ನೀಡಿ ರಕ್ಷಣೆ ಮಾಡುವುದು ಪ್ರಜ್ಞಾವಂತರಾದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ತಮ್ಮ ಅವಧಿಯಲ್ಲಿ ರೂ. 300 ರಿಂದ ರೂ. 3000 ಕೋಟಿಗೂ ಹೆಚ್ಚು ವಾರ್ಷಿಕ ವಹಿವಾಟನ್ನು ವೃದ್ಧಿಸಿ ಎ ಗ್ರೇಡ್ ಆಗಿ ಲಾಭದಲ್ಲಿ ನಡೆಯುತ್ತಿರುವ ರಾಜ್ಯದ ಮುಂಚೂಣಿಯಲ್ಲಿರುವ ಬ್ಯಾಂಕ್ ಎಂದು ರೈತರ ಹಿತದೃಷ್ಟಿಯಿಂದ ಶಾಂತಿಗ್ರಾಮದಲ್ಲಿ ಹೊಸದಾಗಿ ಬ್ಯಾಂಕ್ ಶಾಖೆ ತೆರೆದಿರುವುದಾಗಿ ಅದರ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಉಪಾಧ್ಯಕ್ಷ ಗಂಡಸಿಗೌಡ ಅವರು ವಹಿಸಿದ್ದರು. ಸಂಘದ ಸಂಚಾಲಕ ಜಿ.ಆರ್.ಮಂಜೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಂಘದ ವತಿಯಿಂದ ಹಿರಿಯರಾದ ದಾಸಾಬೋಯಿ, ಬೋರೇಗೌಡ, ಜಿ.ಟಿ. ತಿಮ್ಮಪ್ಪಶೆಟ್ಟಿ, ಸೋಮಶೇಖರ್ ಮತ್ತು ಎ.ಆರ್. ಕೃಷ್ಣಯ್ಯ ಅವರುಗಳನ್ನು ಸನ್ಮಾನಿಸಲಾಯಿತು. ಹಾಸನ ಜಿಲ್ಲಾ ಸೈನಿಕರ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷ ಜಿ.ಎನ್.ನಾಗರಾಜು, ಸಂಘದ ಪ್ರಧಾನ ಕಾರ್ಯದರ್ಶಿ ಎಲ್. ರಂಗಪ್ಪ ಅವರು ಮಾತನಾಡಿದರು.

ಪವಿತ್ರ ಮತ್ತು ಸಂಗಡಿಗರು ಪ್ರಾರ್ಥಿಸಿದರು. ನಿವೃತ್ತ ದೈಹಿಕ ಶಿಕ್ಷಕ ಎಸ್.ಆರ್.ವಿಜಯಕುಮಾರ್ ಅವರು ಸ್ವಾಗತಿಸಿದರೆ, ಖಜಾಂಚಿ ತಿಮ್ಮಪ್ಪ ಶೆಟ್ಟಿ ವಂದಿಸಿದರು.

# ಸಕಲೇಶಪುರ: ಪುರಸಭೆಯಿಂದ ಬೀದಿ ಬದಿ ಅಂಗಡಿಗಳ ತೆರವು

• ಪ್ರಜೋದಯ ವರದಿ

ಸಕಲೇಶಪುರ: ಪಟ್ಟಣದ ಬೀದಿ ಬದಿಯಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿದ್ದ ಅಂಗಡಿಗಳನ್ನು ಸೋಮವಾರ ಮುಂಜಾನೆ ಪುರಸಭೆ ವತಿಯಿಂದ ಜೆಸಿಬಿ ಯಂತ್ರಗಳನ್ನು ಬಳಸಿ ತೆರವುಗೊಳಿಸಲಾಯಿತು. ಸಕಲೇಶ್ವರ ಸ್ವಾಮಿ ದೇವಸ್ಥಾನದಿಂದ ಚಂಪಕ ನಗರ ಟೋಲ್‌ಗೇಟ್‌ವರೆಗೆ ರಸ್ತೆ ಎರಡೂ ಬದಿಗಳಲ್ಲಿ ಫುಟ್‌ಪಾತ್ ಮೇಲೆ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಸುಮಾರು 50ಕ್ಕೂ ಹೆಚ್ಚು ವಿವಿಧ ಅಂಗಡಿಗಳನ್ನು ತೆರವುಗೊಳಿಸಲಾಗಿದೆ.

ಮುಂಜಾನೆ 5.30 ಗಂಟೆಯಿಂದ ಆರಂಭವಾದ ಈ ಕಾರ್ಯಾಚರಣೆಯನ್ನು ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ನೇತೃತ್ವದಲ್ಲಿ ನಡೆಸಲಾಯಿತು. ಒಂದು ಜೆಸಿಬಿ,



ನಾಲ್ಕು ಟ್ರಾಕ್ಟರ್‌ಗಳು, 30ಕ್ಕೂ ಹೆಚ್ಚು ಪುರಸಭೆ ಸಿಬ್ಬಂದಿ ಹಾಗೂ ಹೆಚ್ಚಿನ ಪೊಲೀಸ್ ಭದ್ರತೆಯೊಂದಿಗೆ ಸತತ ಮೂರು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಅಂಗಡಿಗಳನ್ನು ತೆರವುಗೊಳಿಸಲಾಯಿತು.

**ಮಾತಿನ ಚಕಮಕಿ:** ಕಾರ್ಯಾಚರಣೆ ಆರಂಭವಾದ ಕೆಲವೇ ಕ್ಷಣದಲ್ಲಿ ಸ್ಥಳಕ್ಕೆ ಗುಂಪುಗೂಡಿದ ಬೀದಿಬದಿ ವ್ಯಾಪಾರಿಗಳು ಪುರಸಭೆ ಸಿಬ್ಬಂದಿಗಳೊಂದಿಗೆ ಮಾತಿನ ಚಕಮಕಿ ನಡೆಸಿ ಕೆಲ ಕಾಲ ಕಾರ್ಯಾಚರಣೆಗೆ ಅಡ್ಡಿಪಡಿಸಲು ಯತ್ನಿಸಿದರು. ಆದರೆ, ಹೆಚ್ಚಿನ ಪೊಲೀಸ್ ಭದ್ರತೆ ನಿಯೋಜಿಸಲಾಗಿದ್ದರಿಂದ ಯಾವುದೇ ಅಹಿತಕರ ಘಟನೆ ನಡೆಯದೆ ಕಾರ್ಯಾಚರಣೆ ಸುಗಮವಾಗಿ ಪೂರ್ಣಗೊಂಡಿತು.

ಹಲವು ವರ್ಷಗಳಿಂದ ಪಟ್ಟಣದ ಹಳೇ ಬಸ್ ನಿಲ್ದಾಣ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶ ಗೂಡಂಗಡಿಗಳಿಂದ ಕೊಳಗೇರಿಯಂತೆ ಕಾಣುತ್ತಿತ್ತು. ಇದರಿಂದ ಪಟ್ಟಣದ ಸೌಂದರ್ಯಕ್ಕೆ ಧಕ್ಕೆ ಉಂಟಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಬೀದಿ ಬದಿ ಅಂಗಡಿಗಳ ತೆರವಿಗೆ ಸಾರ್ವಜನಿಕ ವಲಯದಿಂದ ಒತ್ತಾಯ ಕೇಳಿ ಬಂದಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಪರ್ಯಾಯ ವ್ಯವಸ್ಥೆ ಕಲ್ಪಿಸಿದ ಬಳಿಕವೇ ಅಂಗಡಿಗಳನ್ನು ತೆರವುಗೊಳಿಸಬೇಕು ಎಂದು ನ್ಯಾಯಾಲಯ ಈ ಹಿಂದೆ ಆದೇಶಿಸಿತ್ತು. ಈ ಬಗ್ಗೆ ವ್ಯಾಪಾರಿಗಳು ವಿರೋಧ ವ್ಯಕ್ತಪಡಿಸಿದರೂ, ಸಾರ್ವಜನಿಕ ಹಿತಾಸಕ್ತಿಯನ್ನು ಮುಂದಿಟ್ಟುಕೊಂಡು ಕ್ರಮ ಕೈಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಐದು ವರ್ಷಗಳ ಹಿಂದೆ ಅಂದಿನ ಉಪವಿಭಾಗಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರು ಫುಟ್‌ಪಾತ್‌ನಲ್ಲಿದ್ದ ಎಲ್ಲಾ ಅಂಗಡಿಗಳನ್ನು ತೆರವುಗೊಳಿಸಿದ್ದರು. ಆದರೆ, ನಂತರ ಮತ್ತೆ ಕೆಲ ವ್ಯಾಪಾರಿಗಳು ಫುಟ್‌ಪಾತ್ ಮೇಲೆ ಅಂಗಡಿಗಳನ್ನು ನಿರ್ಮಿಸಿಕೊಂಡಿದ್ದರು.

ಇತ್ತೀಚೆಗೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಪಟ್ಟಣಕ್ಕೆ ಭೇಟಿ ನೀಡಿದ್ದ ವೇಳೆ ಫುಟ್‌ಪಾತ್ ಅತಿಕ್ರಮಣ ಕುರಿತು ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿ ಬಂದ ಹಿನ್ನಲೆಯಲ್ಲಿ ಪುರಸಭೆ ಕಠಿಣ ಕ್ರಮ ಕೈಗೊಂಡಿದೆ ಎನ್ನಲಾಗಿದೆ.

# ಜ.1 ರಂದು ಭೀಮ ಕೋರೆಂಗಾವ್ ವಿಜಯೋತ್ಸವ

• ಪ್ರಜೋದಯ ವರದಿ

**ಬೇಲೂರು:** ಭೀಮ ಕೊರೆಂಗಾವ್ ವಿಜಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಆಚರಣಾ ಸಮಿತಿ ಸದಸ್ಯರು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಭೀಮ ಕೊರೆಂಗಾವ್ ವಿಜಯೋತ್ಸವ ಸಮಿತಿ ಜಂಟಿ ಅಧ್ಯಕ್ಷ ಸತೀಶ್ ಹಾಗು ಅಶೋಕ್ ಅವರು ಮಾತನಾಡಿ, ಜ.1 ರಂದು ಬೆಳಿಗ್ಗೆ 11 ಗಂಟೆಗೆ 208 ನೇ ಭೀಮ ಕೊರೆಂಗಾವ್ ವಿಜಯೋತ್ಸವದ ಅಂಗವಾಗಿ ತಹಶೀಲ್ದಾರ್ ಕಚೇರಿ ಮುಂಭಾಗ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ವಿವಿಧ ಕಲಾ ತಂಡದೊಂದಿಗೆ ಪ್ರಮುಖ ರಸ್ತೆಯಲ್ಲಿ ಭೀಮ ಕೊರೆಂಗಾವ್ ಸ್ಥಬ್ದ ಚಿತ್ರದೊಂದಿಗೆ ಮೆರವಣಿಗೆ ಮೂಲಕ ತಂದು ಜೂನಿಯರ್ ಕಾಲೇಜ್ ಮೈದಾನದಲ್ಲಿ ಬೃಹತ್ ವಿಜಯೋತ್ಸವ ಆಚರಿಸಲಾಗುವುದು ಎಂದರು.




ಸಮಾರಂಭದಲ್ಲಿ ಶಾಸಕ ಹೆಚ್.ಕೆ.ಸುರೇಶ್, ಶ್ರೀ ಸಿದ್ದಬಸವ ಕಬೀರ ಸ್ವಾಮೀಜಿ ಮತ್ತು ಮುಖ್ಯ ಭಾಷಣಕಾರರಾಗಿ ಸುಧೀರ್ ಕುಮಾರ್ ಮುರಳಿ ಕೊಪ್ಪ, ಸಂಸದ ಶ್ರೇಯಸ್ ಪಟೇಲ್ ಸೇರಿದಂತೆ ವಿವಿಧ ಗಣ್ಯರು ಹಾಗು ವಿವಿಧ ನಾಯಕರು ಹಾಜರಿರಲಿದ್ದಾರೆ ಎಂದು ತಿಳಿಸಿದರು.

ಗೌರವ ಅಧ್ಯಕ್ಷ ಎಂಜೆ ವೆಂಕಟೇಶ ಮಾತನಾಡಿ, ಹಿರಿಯರ ಮಾರ್ಗದರ್ಶನದಲ್ಲಿ ಸುಮಾರು 5 ವರ್ಷಗಳಿಂದ ಈ ಕೋರೆಂಗಾವ್ ವಿಜಯೋತ್ಸವ ಆಚರಿಸಿಕೊಂಡು ಬರುತ್ತಿದ್ದು, ಈ ಬಾರಿ ಯುವಕರಿಗೆ ಹೆಚ್ಚಿನ ಪ್ರಶಸ್ತ ನೀಡಿ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಲು ಮನವಿ ಮಾಡಿದರಲ್ಲದೆ, ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವರು ಎಂದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ, ಶಶಿಧರ್ ಮೌರ್ಯ, ವೆಂಕಟೇಶ್ ಹಾಜರಿದ್ದರು.

# ಹೆಬ್ಬಾರ್ ಜನ್ಮದಿನ: 58 ಜನರಿಂದ ರಕ್ತದಾನ

• ಪ್ರಜೋದಯ ವರದಿ

**ಹಾಸನ:** ಡಾ. ಗುರುರಾಜ್ ಹೆಬ್ಬಾರ್ ಅವರ ಜನ್ಮ ದಿನದ ಅಂಗವಾಗಿ ಸೋಮವಾರ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಡಾ. ಗುರುರಾಜ್ ಹೆಬ್ಬಾರ್ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಿಂದ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ಹಾಗು ಎಂ.ಜಿ. ರಸ್ತೆಯ ಆದಿಚುಂಚನಗಿರಿ ಕಲ್ಯಾಣ ಮಂಟಪ ಎದುರು ಹಮ್ಮಿಕೊಂಡಿದ್ದ ಶಿಬಿರದಲ್ಲಿ ಒಟ್ಟು 58 ಜನರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ದೀರ್ಘಕಾಲ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಜಿಲ್ಲಾ ರೆಡ್ ಕ್ರಾಸ್ ಉಪಸಭಾಪತಿಯಾಗಿ ಕಾರ್ಯ ನಿರ್ವಹಿಸಿದ್ದ ದಿ. ಡಾ. ಗುರುರಾಜ್ ಹೆಬ್ಬಾರ್ ಅವರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸಲಾಯಿತು.




ರಕ್ತದಾನ ಮಾಡುವುದರಿಂದ ಹಲವರ ಜೀವ ಮತ್ತು ಜೀವನ ಉಳಿಸಲು ಸಾಧ್ಯವಾಗುತ್ತದೆ. ಅಲ್ಲದೆ ರಕ್ತದಾನದಿಂದ ಆರೋಗ್ಯವೂ ಉತ್ತಮವಾಗಿರುತ್ತದೆ ಎಂದರು.

ಜಿಲ್ಲಾ ರೆಡ್‌ಕ್ರಾಸ್ ಕಾರ್ಯದರ್ಶಿ ಶಬ್ಬೀರ್ ಅಹ್ಮದ್, ನಿರ್ದೇಶಕರಾದ ಕೆ.ಟಿ.ಜಯಶ್ರೀ, ಕುಮಾರ್, ಬಿಜೆಪಿ ಮುಖಂಡ ಐನೆಟ್ ವಿಜಯ್ ಮತ್ತಿತರರಿದ್ದರು.

# ಕನ್ನಡದ ನೊಬೆಲ್ ಕುವೆಂಪುವಿಗೆ ಸಲ್ಲುತ್ತಿತ್ತು: ಲತಾಕುಮಾರಿ

• ಪ್ರಜೋದಯ ವರದಿ

**ಹಾಸನ:** ಕನ್ನಡಕ್ಕೆ ನೊಬೆಲ್ ಪಾರಿತೋಷಕ ಕೊಡುವುದಿದ್ದರೆ ಅದು ಕುವೆಂಪು ಅವರಿಗೇ ಸಲ್ಲುತ್ತಿತ್ತು. ಅವರೊಬ್ಬ ಮಹಾನುಭಾವ, ಅವರ ಪ್ರೌಢಿಮೆಗೆ ಅವರು ಇಂಗ್ಲೀಷ್‌ನಲ್ಲೂ ಬರೆದು ವಿಶ್ವಮಾನ್ಯರಾಗಬಹುದಾಗಿತ್ತು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮ ಜಯಂತಿ ಅಂಗವಾಗಿ ಕುವೆಂಪು ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿ ಮಾತನಾಡಿದ ಅವರು, ಕುವೆಂಪು ಎಂದಾಕ್ಷಣ ಬಾರಿಸು ಕನ್ನಡ ಡಿಂಡಿಮವ ಎಂಬ ಕವಿತೆ ನೆನಪಾಗುತ್ತದೆ. ಓ ನನ್ನ ಚೇತನಾ ಕವಿತೆ ಶತಮಾನ ಕಳೆದರೂ ಅಚ್ಚಳಿಯದೇ ಉಳಿದಿದೆ. ಕುವೆಂಪು ಕೇವಲ ಕನ್ನಡದ ಕವಿಯಲ್ಲ, ರಾಷ್ಟ್ರಕವಿ ಎಂದು ಬಣ್ಣಿಸಿದರು.



ಕುವೆಂಪು ಅವರ ಸಾಹಿತ್ಯ ಸರ್ವರ ಏಳಿಗೆಗೂ ಅವಶ್ಯ. ಅವರ ಸಾಹಿತ್ಯವನ್ನು ಓದಿದವರು ಈ ಸಮಾಜದಲ್ಲಿ ಉತ್ತಮರಾಗಿ ಬಾಳಬಲ್ಲರು. ನಾವು ವಿದ್ಯಾಭ್ಯಾಸದ ಅವಧಿಯಿಂದಲೂ ಅವರ ಕೃತಿಗಳನ್ನು ಓದುತ್ತಾ ಬಂದಿದ್ದೇನೆ. ನಾವು ಕಲಿಯುತ್ತೇವೆ, ಸಂತೋಷ ಪಡುತ್ತೇವೆ, ನಮ್ಮ ಬದುಕಿಗೆ ಅವರ ಬರಹ ಹೊಸ ಚೈತನ್ಯ ತುಂಬಿದೆ ಎಂದರು.

ಆಗಾಧ ಚೇತನ ನಮ್ಮ ನಡುವೆ ಇತ್ತು ಎಂಬುದೇ ನಮಗೆ ಹೆಮ್ಮೆಯ ವಿಷಯ. ನಾನು ಕುವೆಂಪು ಅವರ ಅಭಿಮಾನಿ, ಅವರ ದೊಡ್ಡ ದೊಡ್ಡ ಪುಸ್ತಕಗಳನ್ನು ಕೊಂಡು ಓದಿದ್ದನ್ನು ನೆನಪಿಸಿಕೊಂಡ ಅವರು, ಕುವೆಂಪು ನಮ್ಮ ನಾಡಿನಲ್ಲಿ ಹುಟ್ಟಿದ್ದೇ ಒಂದು ಹೆಮ್ಮೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ಇಡೀ ವಿಶ್ವದ ಮೇರು ಕವಿಗಳಲ್ಲಿ ಕುವೆಂಪು ಅಗ್ರ ಪಂಥಿಯಲ್ಲಿ ನಿಲ್ಲುತ್ತಾರೆ. ಜ್ಞಾನಪೀಠ ಲಭಿಸಿದ ರಾಮಾಯಣ ದರ್ಶನಂ ಕೃತಿ ರಚಿಸಿದ ಕುವೆಂಪು ಅವರು, ಶಿಶು ಸಾಹಿತ್ಯವನ್ನೂ ಕೂಡ ರಚಿಸುತ್ತಾರೆ ಎಂದರೆ ಅವರ ಪ್ರಬುದ್ಧತೆಯನ್ನು ನಾವು ಅರ್ಥೈಸಿಕೊಳ್ಳಲೇಬೇಕು ಎಂದರು.

ಕುವೆಂಪು ಬರೀ ಸಾಹಿತಿಯಲ್ಲ, ಮಹಾನ್ ಜ್ಞಾನಿ. ಅವರಿಂದ ರಚಿತವಾದ ಸಾಹಿತ್ಯ ವಿಶ್ವಮಾನ್ಯವಾದುದು, ಅವರ ಬರಹಗಳು ಜಗತ್ತಿನ ಎಲ್ಲಾ ಭಾಷೆಗಳಿಗೂ ತರ್ಜುಮೆಗೊಂಡು ಸರ್ವರು ಓದಬೇಕಾದ ಅಗತ್ಯತೆ ಇದೆ. ನಾಡಗೀತೆಯಲ್ಲಿ ಕುವೆಂಪು ಅವರು ಕರ್ನಾಟಕದ ಪ್ರಕೃತಿ ಸೌಂದರ್ಯವನ್ನು, ಪರ್ವತ, ನದಿ, ಕಾಡು, ಹೊಲಗಳ ವೈಭವವನ್ನು ಅತ್ಯಂತ ಮನೋಹರವಾಗಿ ಚಿತ್ರಿಸಿದ್ದಾರೆ. ಜೊತೆಗೆ, ನಾಡಿನ ಜನರ ಶ್ರಮ, ಸಹನಶೀಲತೆ, ಮಾನವೀಯ ಮೌಲ್ಯಗಳು ಹಾಗೂ ಸ್ವಾಭಿಮಾನವನ್ನು ಉನ್ನತ ಮಟ್ಟದಲ್ಲಿ ಪ್ರಶಂಸಿಸಿದ್ದಾರೆ. 20ನೇ ವಯಸ್ಸಿನಲ್ಲೇ ಯುವಕ ಕುವೆಂಪು ರಚಿಸಿದ ನಾಡಗೀತೆಗೆ ಒಂದು ಶಬ್ದ ತೆಗೆಯಲು, ಸೇರಿಸಲು ಆಗದ ಸಮ ತೂಕದ ಗೀತೆ ರಚಿಸಿದ್ದಾರೆ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ, ಕಸಾಪ ರಾಜ್ಯ ಸಮಿತಿ ಸದಸ್ಯ ಹೆತ್ತೂರು ನಾಗರಾಜು, ಸಂಘಟನಾ ಕಾರ್ಯದರ್ಶಿ ಆರ್.ಬಿ ಶಂಕರ್, ಸಹ ಕಾರ್ಯದರ್ಶಿ ನಾಗೇಶ್, ಪದಾಧಿಕಾರಿಗಳಾದ ಕಮಲಮ್ಮ, ಪ್ರಕಾಶ್ ಮೇಗಳಕೇರಿ, ಆಲೂರು ತಾಲ್ಲೂಕು ಕಸಾಪ ಅಧ್ಯಕ್ಷ ಆದಿಲ್, ಚನ್ನರಾಯಪಟ್ಟಣ ತಾಲೂಕು ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಪೃಥ್ವಿ ಹಾಗೂ ಗಿರೀಶ್ ಇದ್ದರು.


## ವಿಶ್ವ ಹಿತ ಚಿಂತಕರ ಸಮಾವೇಶ ಸಮಾರೋಪ | ಡಾ. ಭೀಮೇಶ್ವರ ಜೋಶಿ ಸಲಹೆ

# ಸಮಾವೇಶಗಳು ಆತ್ಮಾವಲೋಕನ ವೇದಿಕೆಯಾಗಲಿ

• ಪ್ರಜೋದಯ ವರದಿ

**ಹಾಸನ:** ಬ್ರಾಹ್ಮಣ ಸಮುದಾಯವು ಪ್ರಸ್ತುತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು, ಸಮಾವೇಶಗಳನ್ನು ಕೇವಲ ಸಂತಸ ಪಡುವ ಕೇಂದ್ರವಾಗಿಸದೆ ಆತ್ಮಾವಲೋಕನದ ವೇದಿಕೆಯನ್ನಾಗಿಸಬೇಕೆಂದು ಹೊರನಾಡು ಶ್ರೀ ಕ್ಷೇತ್ರದ ಧರ್ಮದರ್ಶಿ ಡಾ. ಭೀಮೇಶ್ವರ ಜೋಶಿ ಅವರು ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಕಾಲೇಜು ಆವರಣದಲ್ಲಿ ಎರಡು ದಿನ ನಡೆದ 'ದ್ವಿತೀಯ ಜಿಲ್ಲಾ ಬ್ರಾಹ್ಮಣ ಸಮ್ಮೇಳನ ಹಾಗು ವಿಶ್ವ ಹಿತಚಿಂತಕರ ಸಮಾವೇಶ' ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ವಿಪ್ರ ಸಮಾಜದವರ ಏಳಿಗೆಯನ್ನು ಮತ್ತೊಬ್ಬ ವಿಪ್ರರೇ ಅಡ್ಡಗಾಲು ಹಾಕಿ ತಡೆಯುತ್ತಿರುವುದು ದುರದೃಷ್ಟಕರ. ನಮ್ಮವರು ಒಬ್ಬರು ಬೆಳೆಯುತ್ತಿದ್ದಾರೆ ಎಂದರೆ ಅವರಿಗೆ ಸಾಧ್ಯವಾದರೆ ಸಹಕಾರ ನೀಡಿ, ಇಲ್ಲವಾದರೆ ಮೌನವಾಗಿರಿ. ಆದರೆ ನಿಮ್ಮ ಅಸೂಯೆಯಿಂದ ಅಡ್ಡಗಾಲು ಹಾಕಬೇಡಿ, ಅದರಿಂದ ಇಡೀ ಸಮುದಾಯಕ್ಕೆ ತೊಂದರೆಯಾಗುತ್ತದೆಂದರು.




ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗುತ್ತಿರುವ ಇಂದಿನ ಪೀಳಿಗೆಗೆ ತಂದೆ-ತಾಯಿ ಸನಾತನ ಧರ್ಮಾಚರಣೆಯನ್ನು ಮನೆಯಲ್ಲೇ ಕಲಿಸಬೇಕೆಂದು ಕರೆ ನೀಡಿದರು.

ಬ್ರಾಹ್ಮಣ ಅಭಿವೃದ್ಧಿ ಮಂಡಳಿ ರಾಜ್ಯಾಧ್ಯಕ್ಷ ಅಸಗೋಡು ಜಯಸಿಂಹ ಅವರು ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಮೂಲಕ ಬಡ ವಿಪ್ರರಿಗೂ ನೆರವಾಗುತ್ತಿದೆ. ಮುಖ್ಯಮಂತ್ರಿ ಹಾಗು ದಿನೇಶ್ ಗುಂಡೂರಾವ್ ಅವರು ಸಮಾಜದ ಯೋಜನೆಗಳಿಗೆ ಬೆಂಬಲ ನೀಡುತ್ತಿದ್ದಾರೆಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದೇವೇಗೌಡ ಅವರು ಹಾರನಹಳ್ಳಿ ರಾಮಸ್ವಾಮಿ ಅವರ ಸೇವೆ ಸ್ಮರಿಸಿದರು.

### ಸಮಾವೇಶಕ್ಕೆ ವರ್ಣರಂಜಿತ ತೆರೆ

ಜಿಲ್ಲಾ ಬ್ರಾಹ್ಮಣ ಸಭಾದಿಂದ ಹಮ್ಮಿಕೊಂಡಿದ್ದ ವಿಶ್ವ ಹಿತಚಿಂತಕರ ಸಮಾವೇಶ ಅರ್ಥಪೂರ್ಣವಾಗಿ ಸಂಪನ್ನಗೊಂಡಿತು. ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮ ಅಚ್ಚುಕಟ್ಟಾಗಿ ಮೂಡಿಬಂತು. ವಿವಿಧ ಗೋಷ್ಟಿಗಳು ಸಭೀಕರಿಗೆ ಸಾಕಷ್ಟು ಮಾಹಿತಿ ನೀಡಿದವು. ಶತಕೋಟಿ ಗಾಯತ್ರಿ ಜಪವು ಸಮುದಾಯದ ಧಾರ್ಮಿಕ ಶ್ರದ್ಧೆಯನ್ನು ಪ್ರತಿಬಿಂಬಿಸಿತು. ಗಾಳಿಪಟ ಪ್ರದರ್ಶನ ಹಾಗು ಮಹಿಳೆಯರಿಗೆ ಮೆಹಂದಿ ಕಾರ್ಯಕ್ರಮಕ್ಕೆ ಉತ್ತಮ ಬೆಂಬಲ ದೊರೆಯಿತು.

ಜಿಲ್ಲಾ ಬ್ರಾಹ್ಮಣ ಸಭಾಧ್ಯಕ್ಷ ಹೆಚ್.ಎಸ್. ಮಂಜುನಾಥ್ ಮೂರ್ತಿ ಸಮ್ಮೇಳನದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ವಂದಿಸಿದರು. ವೇದಿಕೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ರಘುನಾಥ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

**ಸಮುದಾಯದ ಜೊತೆಗಿರುವೆ: ಸಂಸದ ಶ್ರೇಯಸ್**

ಸಂಸದ ಶ್ರೇಯಸ್ ಎಂ. ಪಟೇಲ್ ಅವರು ಮಾತನಾಡಿ, ಭಾರತೀಯ ಸಂಸ್ಕಾರ ಹಾಗೂ ಸಂಸ್ಕೃತಿಯ ಉಳಿವಿಗೆ ಬ್ರಾಹ್ಮಣ ಸಮಾಜ ನೀಡಿದ ಕೊಡುಗೆ ಅಪಾರವಾಗಿದೆ. ಸಮ್ಮೇಳನದ ಪ್ರವೇಶ ದ್ವಾರಕ್ಕೆ 'ಅಧ್ಯಾತ್ಮ ಪ್ರಕಾಶ' ಎಂದು ಹೆಸರಿಟ್ಟಿರುವುದು ನನ್ನ ತವರು ಕ್ಷೇತ್ರ ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯವನ್ನು ನೆನಪಿಸಿ ಮನಸ್ಸಿಗೆ ಸಂತೋಷ ನೀಡಿದೆ. ಸಮುದಾಯದ ಯಾವುದೇ ಕಷ್ಟದ ಸಂದರ್ಭದಲ್ಲೂ ನಾನು ಸದಾ ನಿಮ್ಮ ಸಹಾಯಕ್ಕೆ ಇರುತ್ತೇನೆಂದು ಭರವಸೆ ನೀಡಿದರು.

# ವಿಶ್ವಮಾನವ ದಿನವಾಗಿ ಕುವೆಂಪು ಜನ್ಮದಿನ

• ಪ್ರಜೋದಯ ವರದಿ

**ಹಾಸನ:** ಕನ್ನಡದ ಮಹಾಕವಿ ಡಾ. ಕುವೆಂಪು ಅವರು ತಮ್ಮ ಜೀವನ ಮತ್ತು ಸಾಹಿತ್ಯದ ಮೂಲಕ ವಿಶ್ವಮಾನವ ಎಂಬ ಮಹತ್ವದ ಸಂದೇಶವನ್ನು ಸಾರಿದರು. ಅವರ ಚಿಂತನೆಯ ಪ್ರಕಾರ, ಮಾನವನು ಜಾತಿ, ಧರ್ಮ, ಭಾಷೆ, ದೇಶಗಳ ಗಡಿಗಳನ್ನು ಮೀರಿ ಎಲ್ಲರನ್ನೂ ಒಂದೇ ಮಾನವ ಕುಟುಂಬವೆಂದು ಕಾಣಬೇಕು ಎಂದು ಸಂಸ್ಥೆಯ ಕಾರ್ಯದರ್ಶಿ ಎಂ.ನಟರಾಜ್ ತಿಳಿಸಿದರು.

ನಗರದ ಎಸ್.ಆರ್.ಎಸ್. ಪ್ರಜ್ಞಾ ವಿದ್ಯಾ ಶಾಲೆಯಲ್ಲಿ ರಾಷ್ಟ್ರ ಕವಿ ಕುವೆಂಪುರವರ 121 ನೇ ಜನ್ಮ ದಿನದ ಪ್ರಯುಕ್ತ ವಿಶ್ವ ಮಾನವ ದಿನವನ್ನು ಕುವೆಂಪುರವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಮಾತನಾಡಿ, ಈ ಮಾನವತಾವಾದಿ ಸಂದೇಶವನ್ನು ಸಮಾಜಕ್ಕೆ ಸಾರುವ ಉದ್ದೇಶದಿಂದ ಕುವೆಂಪು ಅವರ ಜನ್ಮ ದಿನವನ್ನು ವಿಶ್ವ ಮಾನವ ದಿನವಾಗಿ ಆಚರಿಸಲಾಗುತ್ತದೆ. ಕುವೆಂಪು ಅವರು ಮಾನವ ಧರ್ಮವನ್ನು ಎಲ್ಲ ಧರ್ಮಗಳಿಗಿಂತ ಮೇಲಾಗಿ ಕಂಡರು. ಮಾನವ ಧರ್ಮವೇ ಮಹಾಧರ್ಮ ಎಂಬ ಅವರ ಚಿಂತನೆ ಇಂದು ಕೂಡ ಪ್ರಸ್ತುತವಾಗಿದೆ ಎಂದರು.




ಇಂದು ನಾವು ವಿಶ್ವಮಾನವ ದಿನವನ್ನು ಆಚರಿಸುವಾಗ ಕುವೆಂಪುರವರ ಆದರ್ಶಗಳ ಜೊತೆಗೆ ಅವರು ತಿಳಿಸಿದ ವಿಶ್ವ ಮಾನವ ಗುಣಗಳಾದ ಪ್ರೀತಿ, ಸಹಾನುಭೂತಿ, ಸಹಿಷ್ಣುತೆ, ಸೇವಾ ಮನೋಭಾವ ಮತ್ತು ಮಾನವೀಯತೆಯ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಕುವೆಂಪುರವರು ಇಚ್ಚಿಸುವಂತೆ ಮಾನವತೆ ತುಂಬಿದ ಶಾಂತಿಯುತ ಮತ್ತು ಸಮಾನತೆಯ ಸಮಾಜವನ್ನು ನಿರ್ಮಿಸುವ ಸಂಕಲ್ಪವನ್ನು ಮಾಡೋಣ ಎಂದು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಭಾಷಣ, ಪಿಪಿಟಿ ಹಾಗೂ ಕುವೆಂಪುರವರ ಜೀವನ ಚರಿತ್ರೆಯ ವೀಡಿಯೋಗಳನ್ನು ಪ್ರದರ್ಶಿಸಲಾಯಿತು. ಜೊತೆಗೆ ಮಾನವ ಹಕ್ಕುಗಳು ಮತ್ತು ಸಾಮಾಜಿಕ ಜವಾಬ್ದಾರಿಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಸಂಸ್ಥೆಯ ಟ್ರಸ್ಟಿ ಆಶಾ ನಟರಾಜ್, ಶಿಕ್ಷಕ ವೃಂದದವರು ಹಾಗೂ ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಾಳ್ಳುಪೇಟೆ ಸಮೀಪ ಸರ್ವೀಸ್ ರಸ್ತೆ ಕಾಮಗಾರಿ ಶೀಘ್ರ ಆರಂಭ

## ಶಾಸಕ ಸಿಮೆಂಟ್ ಮಂಜು ಭರವಸೆ | ಹೆದ್ದಾರಿ ಅಧಿಕಾರಿಗಳೊಂದಿಗೆ ಪರಿಶೀಲನೆ

• ಪ್ರಜೋದಯ ವರದಿ



**ಸಕಲೇಶಪುರ:** ನಿರಂತರ ಅಪಘಾತ ಸಂಭವಿಸುತ್ತಿರುವ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಬಾಳ್ಳುಪೇಟೆಯಲ್ಲಿ 1.24 ಕಿ.ಮೀ. ಉದ್ದದ ಸರ್ವೀಸ್ ರಸ್ತೆ ಕಾಮಗಾರಿ ಶೀಘ್ರ ಪ್ರಾರಂಭವಾಗಲಿದೆಯೆಂದು ಶಾಸಕ ಸಿಮೆಂಟ್ ಮಂಜು ಅವರು ಭರವಸೆ ನೀಡಿದರು.

ಬೆಂಗಳೂರು-ಮಂಗಳೂರು ಚತುಷ್ಪಥದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ನಿರ್ದೇಶಕರೊಂದಿಗೆ ಸೋಮವಾರ ಆಲೂರಿ ನಿಂದ ಮಾರನಹಳ್ಳಿವರೆಗೆ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಬಾಳ್ಳು ಪೇಟೆ -ಜೆಪಿ ನಗರ ಮಧ್ಯದಲ್ಲಿ ಅಪಘಾತ ಹೆಚ್ಚುತ್ತಿದೆ. ಈ ವ್ಯಾಪ್ತಿಯಲ್ಲಿ ಬ್ಲಾಸಮ್, ಸಿದ್ದಣ್ಣಯ್ಯ ಹಾಗು ವಿವೇಕಾ ಕಾನ್ವೆಂಟ್ ಶಾಲೆಗಳಿವೆ. ಮಕ್ಕಳು ಮಾತ್ರವಲ್ಲದೆ ಎಲ್ಲರೂ ಅಪಾಯದಲ್ಲಿ ನಡೆದು ಹೋಗಬೇಕಾಗಿರುವುದರಿಂದ ಅಲ್ಲಿಗೆ ಒಂದು ಸರ್ವೀಸ್ ರಸ್ತೆ ಬೇಕೆಂದು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಲಾ ಗಿತ್ತು. ಈ ಕಾಮಗಾರಿಗೆ ಅನುಮೋದನೆ ಸಿಕ್ಕಿದ್ದು ಕಾಮಗಾರಿ ಶುರುವಾಗುತ್ತದೆ. ಶಾಲೆಗಳಿರುವ ಇದೇ ಪ್ರದೇಶದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಸ್ಕೈ ವಾಕ್ ನಿರ್ಮಾಣ ಮಾಡುವಂತೆಯೂ ಮನವಿ ಸಲ್ಲಿಸಲಾಗಿದೆಯೆಂದರು.

ಮಳಲಿ, ಕೌಡಹಳ್ಳಿ ಸಂಪರ್ಕ ಕಲ್ಪಿಸುವ ಜಾಗಗಳಲ್ಲಿಯೂ ಅಪಘಾತ ಸಂಭವಿಸುತ್ತಿವೆ. ಈ ಎರಡೂ ಕಡೆ ಸೇತುವೆ ನಿರ್ಮಾಣ ಮಾಡುವಂತೆ ಈ ಹಿಂದೆಯೇ ಮನವಿ ಸಲ್ಲಿಸಲಾಗಿದ್ದು, ಈ ಬಗ್ಗೆ ಎನ್‌ಎಚ್‌ಎಐ ಅಧಿಕಾರಿಗಳು ಸಹ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಎರಡು ಕಡೆ ಪ್ಲೈ ಓವರ್ ಅತ್ಯಗತ್ಯವಾಗಿದೆ ಎಂದರು.

ಕೆಂಪೇಗೌಡ ಪ್ರತಿಮೆ ವೃತ್ತದಲ್ಲಿ ಹೆದ್ದಾರಿಯಿಂದ ಪಟ್ಟಣದ ಕಡೆಗೆ, ಪಟ್ಟಣದ ಕಡೆಯಿಂದ ಹೆದ್ದಾರಿಗೆ ಹೋಗಲು ಸರಿಯಾದ ರಕ್ಷಣೆ ಇಲ್ಲ. ಜೀವ ಕೈಯಲ್ಲಿ ಹಿಡಿದು ಹೆದ್ದಾರಿ ದಾಟಬೇಕಾಗಿದೆ. ಈ ವೃತ್ತದಲ್ಲಿಯೂ ಸಹ ರಸ್ತೆ ಅಪಘಾತ ತಪ್ಪಿಸಲು ಸೇತುವೆ ನಿರ್ಮಿಸುವಂತೆ ಎನ್‌ಎಚ್‌ಎಐ ಯೋಜನಾ ನಿರ್ದೇಶಕರಿಗೆ ಸಮಸ್ಯೆ ವಿವರಿಸಲಾಗಿದೆ ಎಂದರು.

ದೋಣಿಗಾಲ್‌ನಲ್ಲಿ ಹಾಲಿ ರಸ್ತೆ ಸಂಪೂರ್ಣ ಗುಂಡಿಬಿದ್ದು ವಾಹನಗಳ ಸಂಚಾರಕ್ಕೆ ಭಾರೀ ಸಮಸ್ಯೆ ಆಗುತ್ತಿದ್ದು, ಕೂಡಲೇ ಗುಂಡಿ ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಬೇಕೆಂದು ಅಧಿಕಾರಿಗಳಿಗೆ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ನಿರ್ದೇಶಕ ಸೈಯದ್ ಅಮಾನುಲ್ಲಾ, ಡಿವೈಎಸ್‌ಪಿ ಮಾಲತೇಶ್, ಎಆರ್‌ಟಿಓ ಸರಸ್ವತಿ, ಪೊಲೀಸ್ ಇನ್‌ಸ್ಪೆಕ್ಟರ್ ವನರಾಜು ಇದ್ದರು.

### ಟೋಲ್ ಗೇಟ್ ಅವ್ಯವಸ್ಥೆಗೆ ಆಕ್ರೋಶ

ಕ್ರಿಸ್ಮಸ್, ಹೊಸ ವರ್ಷ ಹಾಗು ವಾರಾಂತ್ಯ ಹಿನ್ನಲೆ ಹೆದ್ದಾರಿಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತಿದ್ದು ಚೌಳಗೆರೆ ಟೋಲ್‌ನಲ್ಲಿ ಸರಿಯಾದ ವ್ಯವಸ್ಥೆ ಇಲ್ಲದೆ ವಾಹನಗಳು ಗಂಟೆಗಟ್ಟಲೇ ನಿಲ್ಲುವಂತಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಹೆದ್ದಾರಿಯಲ್ಲಿ ಸಂಭವಿಸುವ ಅಪಘಾತದ ಸಂದರ್ಭದಲ್ಲಿ ಸುಂಕ ವಸೂಲಾತಿ ಕೇಂದ್ರದಿಂದ ಆ್ಯಂಬುಲೆನ್ಸ್, ಕ್ರೇನ್ ಸರ್ವೀಸ್ ಜನರಿಗೆ ಉಪಯೋಗವಾಗದೆ ಇರುವುದನ್ನು ಕಂಡು ಟೋಲ್ ಸಿಬ್ಬಂದಿ ವಿರುದ್ಧ ಅಸಮಾಧಾನ ಹೊರ ಹಾಕಿದರು. ದಿನದ 24 ಗಂಟೆಯೂ ವಾಹನ ಸವಾರರಿಗೆ ಸೂಕ್ತ ಸೌಲಭ್ಯ ಒದಗಿಸುವಂತೆ ಟೋಲ್ ಕಟ್ಟುನಿಟ್ಟಿನ ಸೂಚನೆ ನೀಡಿದರು.



# ಪೋಕ್ಸೋ ಪ್ರಕರಣ ನಿಯಂತ್ರಣ ಎಲ್ಲರ ಆದ್ಯತೆಯಾಗಲಿ

» ಮೊದಲನೇ ಪುಟದಿಂದ

ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಜಿಲ್ಲಾಧಿಕಾರಿ ಅವರು ಉತ್ತಮ ಕೆಲಸ ಮಾಡುತ್ತಿದ್ದು, ನಿಮ್ಮ ಮಾದರಿ ಸೇವೆಯೂ ಎಂದೆಂದಿಗೂ ನೆನಪಿನಲ್ಲಿ ಇರಲಿದೆ. ಇನ್ನೂ ಒಳ್ಳೆಯ ಕೆಲಸ ಮಾಡಿ, ನಿಮಗೆ ನಮ್ಮೆಲ್ಲರ ಬೆಂಬಲ ಸದಾ ಇರಲಿದೆ ಎಂದರು.

ಇನ್ನು ಮುಂದೆ ತಾಲ್ಲೂಕು ಸಂಘಗಳೂ ಜಿಲ್ಲಾ ಸಂಘದ ಅಂಗ ಸಂಸ್ಥೆ ಆಗಲಿವೆ. ನಿಯಮ ಎಲ್ಲರಿಗೂ ಒಂದೇ ಇರಲಿದೆ. ಅದಕ್ಕಾಗಿಯೇ ಏಕ ಕಾಲಕ್ಕೆ ಚುನಾವಣೆ ನಡೆಸಲಾಗಿದೆ. ಆರಂಭದಲ್ಲಿ ನಾವು ತಾಲ್ಲೂಕು ಸಂಘಗಳಿಗೆ ಉಸ್ತುವಾರಿ ನೇಮಕ ಮಾಡಿದೆವು, ಈಗ ಅದು ರಾಜ್ಯಾದ್ಯಂತ ನಡೆಯುತ್ತಿದೆ. ಅಧಿಕಾರ ವಿಕೇಂದ್ರೀಕರಣ ನಮ್ಮ ಉದ್ದೇಶ. ಸಂಘಟನೆ ವಿಚಾರದಲ್ಲಿ ನಿರ್ಧಾರ ಮಾಡಲಾಗುವುದು. ಇದರಲ್ಲಿ ಸ್ವಾರ್ಥ ಇಲ್ಲ, ಇದರಿಂದ ನಮಗೆ ಆಗಬೇಕಾದುದು ಏನೂ ಇಲ್ಲ. ಹಗೆತನ ಇಲ್ಲ, ಸುಖಾ ಸುಮ್ಮನೆ ಪತ್ರಕರ್ತರ ದಾರಿ ತಪ್ಪಿಸುವ ಕೆಲಸ ಬೇಡ, ಒಳ್ಳೆಯ ವಾತಾವರಣ ಹಾಳು ಮಾಡುವುದು ಸರಿಯಲ್ಲವೆಂದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗು ತಾಲ್ಲೂಕು ಘಟಕಗಳನ್ನು ಸದೃಢಗೊಳಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಸಂಘದಲ್ಲಿ ಎಲ್ಲರಿಗೂ ಒಂದೊಂದು ಜವಾಬ್ದಾರಿ ನೀಡಲಾಗಿದ್ದು, ಅವರವರ ಕೆಲಸ-ಕಾರ್ಯಗಳನ್ನು ಅವರು ಮಾಡುತ್ತಿದ್ದಾರೆಂದರು.

ಶೀಘ್ರವೇ ಜಿಲ್ಲಾ ಸಂಘದ ಕಟ್ಟಡ ನವೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಜ. 1ರಿಂದ ಸಂಘದ ಕಚೇರಿಯಲ್ಲಿ ಪತ್ರಕರ್ತರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗುವುದು. ಹಾಗೆಯೇ ರಿಕ್ರಿಯೇಷನ್ ಕ್ಲಬ್ ಆರಂಭಿಸುವ ಚಿಂತನೆಯೂ ಇದೆ ಎಂದರು.

ಉಪಾಧ್ಯಕ್ಷ ಎನ್. ನಂಜುಂಡೇಗೌಡ ಅವರು ಮಾತನಾಡಿ, ಹೊಸ ವರ್ಷದಲ್ಲಿ ನಮ್ಮ ಸಂಘ ಹೊಸ ಹೊಸ ಕನಸು ಹೊಂದಿದೆ. ಅದನ್ನು ಈಡೇರಿಸಲು ಸಂಕಲ್ಪ ಮಾಡಿದ್ದೇವೆ. ಮೊದಲಿಗೆ ಪತ್ರಕರ್ತರಿಗೆ ಸಾಲ ಕೊಡುವ ಯೋಜನೆ ಶುರುವಾಗಲಿದೆ. ಶೀಘ್ರವೇ ಸಹಕಾರ ಸಂಘಕ್ಕೆ ನೋಂದಣಿ ಶುರುವಾಗಲಿದೆ ಎಂದು ಭರವಸೆ ನೀಡಿದರು.

ಸಂಘದ ಮಾಜಿ ಅಧ್ಯಕ್ಷ ಬಾಳ್ಳು ಗೋಪಾಲ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಉಪಾಧ್ಯಕ್ಷ ಜಿ. ಪ್ರಕಾಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ. ಹರೀಶ್, ಕುಶ್ವಂತ್, ಖಜಾಂಚಿ ಪ್ರಕಾಶ್ ಹಾಗು ಕಾರ್ಯಕಾರಿ ಸಮಿತಿ ಸದಸ್ಯರಿದ್ದರು. ಚನ್ನರಾಪಟ್ಟಣದ ಪತ್ರಕರ್ತ ನಾಗೇಶ್ ಪ್ರಾರ್ಥಿಸಿದರು. ಪುಷ್ಪಾ ಜಯರಾಂ ನಿರೂಪಣೆ ಮಾಡಿದರು. ಕಾರ್ಯದರ್ಶಿ ಹರೀಶ್ ಕೆ.ಎಂ. ಸ್ವಾಗತಿಸಿದರು.

### ಸಹಕಾರ ಸಂಘ ಚಿಂತನೆ

ರಾಜ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್ ಅವರು ಮಾತನಾಡಿ, ಪತ್ರಕರ್ತರ ಆರ್ಥಿಕ ಸ್ಥಿತಿ ಗತಿ ಉತ್ತಮವಾಗಿರಬೇಕೆಂಬ ಉದ್ದೇಶದಿಂದ ಸಹಕಾರ ಸಂಘ ಸ್ಥಾಪಿಸಲು ತೀರ್ಮಾನ ಮಾಡಲಾಗಿದೆ. ಅದಕ್ಕಾಗಿ ಷೇರು ಸಂಗ್ರಹ ಮಾಡುವ ಕುರಿತು ಯೋಜನೆ ರೂಪಿಸಲಾಗುವುದು. ಜಿಲ್ಲೆಯ ಎಲ್ಲಾ ಪತ್ರಕರ್ತರು, ಕುಟುಂಬದ ಸದಸ್ಯರು ಷೇರುದಾರರಾಗಲು ಅವಕಾಶವಿದೆ. ಕನಿಷ್ಟ 10 ಲ.ರೂ. ದುಡಿಯುವ ಬಂಡವಾಳ ಇರಬೇಕು, ಸಾಲ ಕೊಡುವ ಮಾನದಂಡ ಏನು ಎಂದು ಮುಂದೆ ಚರ್ಚೆ ಮಾಡಲಾಗುವುದು. ಜನವರಿ ಮೊದಲ ವಾರ ಸಭೆ ಕರೆದು ಅಂತಿಮ ತೀರ್ಮಾನ ಮಾಡಲಾಗುವುದು. ಎಲ್ಲರ ಸಹಕಾರದಿಂದ ಉತ್ತಮ ಸಹಕಾರ ಸಂಘ ಮಾಡೋಣವೆಂದು ಭರವಸೆ ನೀಡಿದರು.

# ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ಗ್ರಾಮಾಂತರ ಹಾಗು ಬೇಲೂರು ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪ ಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆ ರಸ್ತೆಯಲ್ಲಿ ನಡೆದಿದೆ. ಕೆ.ಬ್ಯಾಡರಹಳ್ಳಿ ಗ್ರಾಮದ ಚಂದ್ರಶೇಖರ್ ಮೃತರು.

ಹೊಳೆನರಸೀಪುರದ ಶಾಮಿಯಾನ ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ಡಿ.25ರಂದು ಪಡುವಲಹಿಪ್ಪೆ ಗ್ರಾಮಕ್ಕೆ ಶಾಮಿಯಾನ ಹಾಕಲು ಹೋಗುತ್ತಿದ್ದಾಗ ರಸ್ತೆಗೆ ಹಸು ಅಡ್ಡ ಬಂದಿದ್ದರಿಂದ ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ ಪರಿಣಾಮ ಕೆಳಗೆ ಬಿದ್ದಿದ್ದಾರೆ. ಗಂಭೀರ ಗಾಯಗೊಂಡಿದ್ದ ಅವರನ್ನು ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಭಾನು ವಾರ ಮೃತಪಟ್ಟಿದ್ದಾರೆ. ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ನಿಯಂತ್ರಣ ತಪ್ಪಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬರು ಗಾಯಗೊಂಡಿರುವ ಘಟನೆ ಬೇಲೂರು ತಾಲ್ಲೂಕಿನ ಇಬ್ಬೀಡು ಗಡಿ ಸಮೀಪ ನಡೆದಿದೆ.

ಚಿಕ್ಕಮಗಳೂರು ಜಿಲ್ಲೆ ಕುರುವಂಗಿ ಗ್ರಾಮದ ರಮೇಶ್ ಮೃತರು. ಸಂಬಂಧಿಕ ರವಿ ಗಾಯಾಳು. ಸಂಬಂಧಿಕರ ಆರಾಧನೆ ಹಿನ್ನಲೆಯಲ್ಲಿ ಹಾಸನ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮಕ್ಕೆ ಬಂದಿದ್ದ ಅವರು ವಾಪಾಸ್ ಹೋಗುವಾಗ ಅಪಘಾತ ಸಂಭವಿಸಿದೆ.

ಅತೀವೇಗ ಹಾಗು ನಿರ್ಲಕ್ಷ್ಯದ ಚಾಲನೆಯಿಂದ ಹಂಪ್ ಅನ್ನು ನೆಗೆಸಿದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ತಲೆ ಹಾಗು ಎದೆ ಭಾಗಕ್ಕೆ ಗಂಭೀರ ಗಾಯಗೊಂಡಿದ್ದ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಾಸನ ಕ್ಷೇತ್ರದಲ್ಲಿ ಬದಲಾವಣೆ ಗಾಳಿ: ಪ್ರೀತಮ್



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ನಿಟ್ಟೂರು ಹಾಲು ಉತ್ಪಾದಕರ ಸಹಕಾರ ಸಂಘದ ಚುನಾವಣೆಯಲ್ಲಿ 11ರ ಪೈಕಿ 10 ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ತಾಲ್ಲೂಕಿನ ರಾಜಕೀಯ ಗಾಳಿ ಯಾವ ಕಡೆ ಬೀಸುತ್ತಿದೆಯೆಂಬುದು ಇದರಿಂದ ಗೊತ್ತಾಗುತ್ತಿದೆಯೆಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ.ಗೌಡ ಅವರು ಹೇಳಿದರು.

ಮುಂದಿನ 5 ವರ್ಷಗಳ ಅವಧಿಗೆ ನಡೆದ ನಿಟ್ಟೂರು ಡೈರಿ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ವಿಜೇತರನ್ನು ಅಭಿನಂದಿಸಿ ಮಾತನಾಡಿ, ಪಕ್ಷದ ಕಾರ್ಯಕರ್ತರ ಶ್ರಮದ ಫಲವಾಗಿ 10 ಅಭ್ಯರ್ಥಿಗಳು ವಿಜಯ ಪತಾಕೆ ಹಾರಿಸಿದ್ದಾರೆ. ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ನಿಟ್ಟೂರು ಪಂಚಾಯಿತಿಯಲ್ಲಿ ಯಾವ ಪಕ್ಷ ಮೇಲುಗೈ ಸಾಧಿಸುತ್ತದೆಯೋ ಆ ಪಕ್ಷ ವಿಧಾನಸಭಾ ಚುನಾವಣೆಯಲ್ಲೂ ಗೆಲುವು ಸಾಧಿಸಲಿದೆ ಎಂಬ ಮಾತು ಪ್ರಚಲಿತದಲ್ಲಿದೆ. ಮುಂಬರುವ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗೆ ಬಿಜೆಪಿಯನ್ನು ಬೇರು ಮಟ್ಟದಿಂದ ಬಲಪಡಿಸಬೇಕಿದೆಯೆಂದರು.

2028ರ ಚುನಾವಣೆಯಲ್ಲಿ ರಾಜ್ಯದಲ್ಲಿ 130 ಸ್ಥಾನ ಗೆದ್ದು, ಸ್ವಂತ ಬಲದಿಂದ ಬಿಜೆಪಿ ಅಧಿಕಾರ ಹಿಡಿಯಬೇಕೆನ್ನುವುದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಪೇಕ್ಷೆ. ಅದಕ್ಕಾಗಿ ನಾವೆಲ್ಲೂ ಒಟ್ಟಾಗಿ ಶ್ರಮಿಸಬೇಕಿದೆಯೆಂದರು.

ವಿಜೇತರ ವಿವರ

ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾಗಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಗಂಗಾಧರ, ನಟರಾಜು, ಹುಚ್ಚೇಗೌಡ, ಮಂಜುನಾಥ್, ಮಂಜುಶೆಟ್ಟಿ ಹಾಗು ಮಹಿಳಾ ಮಿಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಪದ್ಮ, ಶಾಂತಮ್ಮ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಮಲ್ಲೇಶ್, ಪ್ರವರ್ಗ-ಎ ಪರಮೇಶಪ್ಪ, ಪ್ರವರ್ಗ-ಬಿಯಿಂದ ಲಿಂಗರಾಜು ಅವರು ಗೆಲುವಿನ ನಗೆ ಬೀರಿದ್ದಾರೆ.

# ಶ್ರೀಮಠದ ಕಾವಲು ಗಣಿಗಾರಿಕೆ ಪರವಾನಗಿ ರದ್ದುಗೊಳಿಸಲು ಆಗ್ರಹ

• ಪ್ರಜೋದಯ ವರದಿ



**ಹಾಸನ:** ಹೊಳೆನರಸೀಪುರ ತಾಲ್ಲೂಕು ಶ್ರೀಮಠದ ಕಾವಲು ಸರ್ವೆ ನಂ.6ರಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಷೇಧಿಸಬೇಕೆಂದು ಆಗ್ರಹಿಸಿ ಮೂಡಲಹಿಪ್ಪೆ ಗ್ರಾಮಸ್ಥರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

15 ಎಕರೆ ಪ್ರದೇಶದಲ್ಲಿ ಕಲ್ಲುಪುಡಿ ಘಟಕ ಹಾಗು ಕಲ್ಲು ತೆಗೆಯಲು ಸ್ಥಳೀಯ ಪ್ರಭಾವಿ ವ್ಯಕ್ತಿಯೊಬ್ಬರು ಪರವಾನಗಿ ಪಡೆದಿದ್ದಾರೆ. ಕಾನೂನು ಪ್ರಕಾರ ಗಣಿಗಾರಿಕೆ ನಡೆಸಿದ್ದರೆ ನಮ್ಮ ಅಭ್ಯಂತರವಿರಲಿಲ್ಲ. ಆದರೆ, 15 ಎಕರೆಗೆ ಅನುಮತಿ ಪಡೆದು ಸುತ್ತಲಿನ 50ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಅಗೆಯಲಾಗಿದೆ. ಅಂದಾಜು 200 ಮೀಟರ್‌ನಷ್ಟು ಭೂಮಿ ಅಗೆದಿದ್ದು, ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಕೂಡಲೇ ಈ ಘಟಕವನ್ನು ಬಂದ್ ಮಾಡಿಸಿ ಸುತ್ತಲಿನ ನಿವಾಸಿಗಳಿಗೆ ಆಗುತ್ತಿರುವ ತೊಂದರೆ ತಪ್ಪಿಸಬೇಕೆಂದು ಒತ್ತಾಯಿಸಿದರು.

2017ರ ಮಾ.23 ರಂದು 20 ವರ್ಷಗಳವರೆಗೆ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ. ಆದರೆ, ಸರ್ಕಾರಿ ಅಧಿಕಾರಿಗಳು ಹಾಗು ತಜ್ಞರು ಗಣಿಗಾರಿಕೆಯಿಂದ ತೊಂದರೆಯಾಗುವ ಬಗ್ಗೆ ಅಧ್ಯಯನ ನಡೆಸಿಲ್ಲ. ಗಣಿಗಾರಿಕೆ ಮತ್ತು ಕಲ್ಲು ಪುಡಿ ಮಾಡು ವಾಗ ಹೊರಬರುವ ದೂಳಿನ ಕಣಗಳು ಗಾಳಿಯಲ್ಲಿ ಬೆರೆತು ವಾಯುಮಾಲಿನ್ಯ ಉಂಟಾಗುತ್ತಿದೆ. ವಾಯು ಮಾಲಿನ್ಯ ತಡೆಗೆ ಜಾಗದಲ್ಲಿ ತಡೆಗೋಡೆ ನಿರ್ಮಿಸದೆ ಸರ್ಕಾರದ ನಿರ್ದೇಶನವನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಘಟಕದಿಂದ ಸ್ವಲ್ಪ ದೂರದಲ್ಲಿ ಪ್ರಾಥಮಿ ಹಾಗು ಪ್ರೌಢಶಾಲೆ, ಹಾಸ್ಟೆಲ್ ಇದೆ. ವಿದ್ಯಾರ್ಥಿಗಳ ವ್ಯಾಸಂಗ ಹಾಗು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಹೇಮಾವತಿ ಬಲದಂಡೆ ನಾಲೆ ಕಾಲುವೆ ನಂ. 35ರಲ್ಲಿ ಕೃಷಿ ಚಟುವಟಿಕೆಗೆ ಹರಿಯುವ ನೀರನ್ನು ಕಲ್ಲು ಗಣಿಗಾರಿಕೆಗೆ ಬಳಸುತ್ತಿದ್ದು ಕೃಷಿಗೂ ಭಾರೀ ತೊಡಕಾಗಿದೆ. ಜೆಸಿಬಿ, ಹಿಟಾಚಿ ಮೂಲಕ ಬೆಟ್ಟ ಅಗೆಯುತ್ತಿರುವುದರಿಂದ ನೂರಾರು ಮರಗಳು ಹಾನಿಗೀಡಾಗಿವೆ. ದೂಳಿನಿಂದ ಕೃಷಿ ಭೂಮಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಅಂತರ್ಜಲ ಮಟ್ಟ ಕುಸಿದು ನೀರಾವರಿಗೆ ಭಾರೀ ತೊಂದರೆಯಾಗುತ್ತಿದೆ ಎಂದು ದೂರಿದರು.

ಜಿಲ್ಲಾಧಿಕಾರಿ ಹಾಗು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಗಣಿಗಾರಿಕೆ ಪರವಾನಗಿ ರದ್ದುಪಡಿಸಬೇಕು. ಇಲ್ಲವಾದರೆ ಕಾನೂನು ಹೋರಾಟ ಮುಂದುವರಿಸಲಾಗುವುದೆಂದು ಎಚ್ಚರಿಕೆ ನೀಡಿದರು. ಗ್ರಾಮಸ್ಥರಾದ ಕುಮಾರ್, ಲೋಕೇಶ್, ಶ್ರೀನಿವಾಸ್, ವಾಸು, ಕುಮಾರ್, ಶಂಕರ್, ರಮೇಶ್ ಮತ್ತಿತರರಿದ್ದರು.

# ರೇವಣ್ಣ ವಿರುದ್ಧದ ಪ್ರಕರಣ ಕೈಬಿಟ್ಟ ಕೋರ್ಟ್

• ಪ್ರಜೋದಯ ವರದಿ



**ಬೆಂಗಳೂರು:** ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ವಿರುದ್ಧ ದಾಖಲಾಗಿದ್ದ ಲೈಂಗಿಕ ದೌರ್ಜನ್ಯ ಪ್ರಕರಣ ವನ್ನು ಕೋರ್ಟ್ ಕೈಬಿಟ್ಟಿದೆ.

ವಿಳಂಬವಾಗಿ ಪ್ರಕರಣ ದಾಖಲಿಸಿದ ಕಾರಣಕ್ಕೆ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಐಪಿಸಿ ಸೆಕ್ಷನ್ 354ಎ ಅಡಿಯ ಆರೋಪದ ಪ್ರಕರಣ ಪರಿಗಣನೆಗೆ ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಧೀಶರಾದ ಕೆ. ಎನ್.ಶಿವಕುಮಾರ್ ಅವರು ನಿರಾಕರಿಸಿ ಆದೇಶ ಹೊರಡಿಸಿದ್ದಾರೆ. ಹೆಚ್.ಡಿ.ರೇವಣ್ಣ ವಿರುದ್ಧ ದೂರು ದಾಖಲಿಸಿದ್ದ ಪ್ರಕರಣದಲ್ಲಿ ಹೈಕೋರ್ಟ್ ಈ ಹಿಂದೆ ಒಂದು ಸೆಕ್ಷನ್ ರದ್ದುಪಡಿಸಿತ್ತು. 354ಎ ಅಡಿಯ ಕೇಸ್ ಕಾಗ್ನಿಜೆನ್ಸ್ ಪಡೆಯಲು 42ನೇ ಎಸಿಜೆಎಂ ಕೋರ್ಟ್ ನಿರಾಕರಿಸಿದೆ. ಹೀಗಾಗಿ ಐಪಿಸಿ ಸೆಕ್ಷನ್ 354ಎ ಅಡಿಯ ಪ್ರಕರಣ ರದ್ದಾಗಿದೆ.

# ದರೋಡೆಗೆ ಯತ್ನಿಸುತ್ತಿದ್ದ ಐವರ ಬಂಧನ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರನ್ನು ಅಡ್ಡ ಹಾಕಿ ಹಣ ಮತ್ತಿತರ ಬೆಲೆಬಾಳುವ ವಸ್ತುಗಳ ದರೋಡೆ ಮಾಡಲು ಹೊಂಚು ಹಾಕಿ ಕುಳಿತಿದ್ದ ಐವರನ್ನು ನಗರ ಠಾಣೆ ಪೊಲೀಸರು ಚನ್ನಪಟ್ಟಣ ಬಡಾವಣೆಯ ದೊಡ್ಡ ಚರಂಡಿ ಬಳಿ ಬಂಧಿಸಿರುವ ಘಟನೆ ನಡೆದಿದೆ.

ಖಚಿತ ಮಾಹಿತಿ ಮೇರೆಗೆ ನಗರ ಠಾಣೆ ಪಿಎಸ್‌ಐ ಪ್ರಿಯಾಂಕ ಹಾಗು ಸಿಬ್ಬಂದಿ ದಾಳಿ ನಡೆಸಿದಾಗ ಕೃತ್ಯ ಬಯ ಲಾಗಿದೆ. ದೊಡ್ಡ ಚರಂಡಿ ಹತ್ತಿರ ಮರಗಿಡಗಳ ಮರೆಯಲ್ಲಿ ಆಟೋ ರಿಕ್ಷಾ ನಿಲ್ಲಿಸಿಕೊಂಡಿದ್ದ ಕಿಡಿಗೇಡಿಗಳು ಕಬ್ಬಿಣದ ರಾಡ್, ದೊಣ್ಣೆ ಸಮೇತ ದಾರಿಯಲ್ಲಿ ಒಬ್ಬಂಟಿ ಯಾಗಿ ಹೋಗುವ ಜನರಿಗೆ ಹೆದರಿಸಲು ಪ್ರಯತ್ನಿಸುತ್ತಿದ್ದರು. ಅವರ ಚಲನವಲನ ಗಮನಿಸಿದ ಪೊಲೀಸರು ದಾಳಿ ನಡೆಸಿ ಶಸ್ತ್ರಾಸ್ತ್ರಗ ಳೊಂದಿಗೆ ವಶಕ್ಕೆ ಪಡೆದಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ಮನೆ ಕೀ ಇಟ್ಟಿದ್ದ ಜಾಗವನ್ನು ಖಚಿತಪಡಿಸಿಕೊಂಡಿದ್ದ ಅದರ ನೆರವಿನಿಂದ ಬಾಗಿಲು ತೆರೆದು ಬೀರುವಿನಲ್ಲಿಟ್ಟಿದ್ದ 85 ಸಾವಿರ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಎಸ್.ಸುರಪುರ ಗ್ರಾಮದಲ್ಲಿ ನಡೆದಿದೆ.

ಕೋಮಲಾ ಅವರು ಡಿ.27ರ ಬೆಳಿಗ್ಗೆ 9 ಗಂಟೆಗೆ ಬೀಗ ಹಾಕಿ ತೋಟಕ್ಕೆ ತೆರಳಿದ್ದರು. ಬೆಳಿಗ್ಗೆ 10.30ಕ್ಕೆ ಉಪಹಾರ ಸೇವಿಸಲೆಂದು ಪುತ್ರ ಪ್ರಮೋದ್ ನಿತ್ಯವೂ ಇಡುತ್ತಿದ್ದ ಹಳೆಯ ಪೆಟ್ಟಿಗೆ ಸಹಾಯದಿಂದ ಕೀ ತೆರೆದು ಒಳ ಹೋದಾಗ ಬೀರುವಿನ ಬಾಗಿಲು ಮುರಿದಿವುದು ಗೊತ್ತಾಗಿದೆ. ಒಂದು ಗಂಟೆ ಅವಧಿಯಲ್ಲಿ ಮನೆಗೆ ನುಗ್ಗಿರುವ ಕಳ್ಳರು 16 ಗ್ರಾಂ ತೂಕದ ಚಿನ್ನದ ಸರ ಮತ್ತು ಡಾಲರ್, ಜುಮುಕಿ ಮತ್ತು ಮೂಗು ನತ್ತು ಕದ್ದಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಫಲಾನುಭವಿಗಳಿಗೆ ಕೊಳವೆ ಬಾವಿ ಮಂಜೂರಾತಿ ಪತ್ರ ವಿತರಣೆ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿಗೆ ಗಂಗಾ ಕಲ್ಯಾಣ ಯೋಜನೆ ಸೌಲಭ್ಯ ಹೆಚ್ಚಿಗೆ ತರಲು ವಿದ್ಯುತ್ ಅಭಾವದ ನೆಪ ತೊಡಕಾಗಿತ್ತು. ಈಗ ಸೆಸ್ಕ್ ಅಧಿಕಾರಿಗಳಿಂದ ಪತ್ರ ಪಡೆದು ಮಾಹಿತಿ ತಿಳಿಸಲಾಗಿದೆ. ಹೆಚ್ಚು ಸಂಖ್ಯೆಯ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆ ನೀಡಲಾಗುವುದೆಂದು ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದದಲ್ಲಿ ಗಂಗಾ ಕಲ್ಯಾಣ ಯೋಜನೆಯ 200 ಫಲಾನುಭವಿಗಳಿಗೆ ಕೊಳವೆ ಬಾವಿ ಮಂಜೂರಾತಿ ಪತ್ರ ವಿತರಿಸಿ ಮಾತನಾಡಿದ ಅವರು, ರೈತರ ಕೃಷಿ ಕಾರ್ಯಗಳಿಗೆ ಪ್ರಮುಖವಾಗಿ ನೀರು ಹಾಗೂ ವಿದ್ಯುತ್ ಅತ್ಯವಶ್ಯಕವಾಗಿದೆ. ಕ್ಷೇತ್ರದ ಎಲ್ಲಾ ಕೆರೆಗಳಿಗೆ ನೀರು ಒದಗಿಸುವ ಕೆಲಸ ಮಾಡುತ್ತಿದ್ದು, ವಿದ್ಯುತ್‌ಗಾಗಿ ಸೌರ ವಿದ್ಯುತ್ ಘಟಕ (ಸೋಲಾರ್ ಪ್ಲಾಂಟ್) ಯೋಜನೆ ಅನುಷ್ಠಾನಕ್ಕೆ ಬರಲಿದೆ. ರೈತರಿಗೆ ದಿನನಿತ್ಯ ಬೆಳಿಗ್ಗೆ 9 ರಿಂದ 3 ರವರೆಗೆ ನಿರಂತರ ವಿದ್ಯುತ್ ನೀಡ ಲಾಗುವುದು. ಇಲ್ಲದವರ ಪಾಲಿಗೆ ಗಂಗಾಕಲ್ಯಾಣ ಯೋಜನೆ ವರದಾನವಾಗಿದೆ ಎಂದರು.

ಗಿಮಿಕ್ ರಾಜಕಾರಣಕ್ಕೆ ಜನ ಮರುಳಾಗಬಾರದು, ಜನರ ಸೇವೆ ಮಾಡುವ ವ್ಯಕ್ತಿಗಳಿಗೆ ಗೆಲುವು ನೀಡಬೇಕು. ಸತತ 4 ಬಾರಿ ಗೆಲುವು ನೀಡಿ ಜನರ ಋಣ ತೀರಿಸುವುದೇ ನನ್ನ ಧ್ಯೇಯ. ಜನರ ಸಮಸ್ಯೆಗಳಿಗೆ ಪಿಡಿಓಗಳ ಸ್ಪಂದನೆ ಬಗ್ಗೆ ಪ್ರತಿ ಜನಸಂಪರ್ಕ ಸಭೆಯಲ್ಲಿ ಚರ್ಚಿಸಲಾಗುವುದು. ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಹಾಗೂ ಮುಖಂಡರು ಖುದ್ದು ಹಾಜರಿದ್ದು ಜನರ ಸಮಸ್ಯೆಗಳನ್ನು ಪರಿಹರಿಸಲು ಗಮನವಹಿಸಬೇಕು ಎಂದರು.

ಗ್ಯಾರಂಟಿ ಯೋಜನೆಗಳಿಂದ ಬಡವರ ಹಾಗೂ ಮಧ್ಯಮ ವರ್ಗದವರ ಜೀವನವು ಸುಗಮ ವಾಗಿ ಸಾಗುತ್ತಿದೆ. 1.10 ಲಕ್ಷ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಹಣ ನೀಡಿದ್ದು ಜನರ ಆರ್ಥಿಕ ವೆಚ್ಚ ಕಡಿಮೆಯಾಗಿ ಆದಾಯ ಹೆಚ್ಚಿದೆ. ಆದರೂ ವಿರೋಧ ಪಕ್ಷದವರು ಬೆಳ ಗಾವಿ ಅಧಿವೇಶನದಲ್ಲಿ ಅನಗತ್ಯ ಚರ್ಚೆ ನಡೆಸಿ ಸಮಯ ವ್ಯಯ ಮಾಡಿದರೆಂದು ಟೀಕಿಸಿದರು.

ವಿದ್ಯುತ್ ಇಲಾಖಾ ಅಧಿಕಾರಿಗಳನ್ನು ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇದ್ದ ಕಾರಣ ಪ್ರಶ್ನೆ ಹಾಕಿದ ಶಾಸಕರು ಕೆಲವೇ ದಿನಗಳಲ್ಲಿ ವಿದ್ಯುತ್ ಇಲಾಖೆ ಅಧಿಕಾರಿಗಳ ಸಭೆ ರೈತರಿಗೆ ಸರಿಯಾಗಿ ವಿದ್ಯುತ್ ನೀಡುವುದು, ಬೋರ್‌ವೆಲ್ ವಿದ್ಯುತ್ ಸಂಪರ್ಕಗಳ ಬಗ್ಗೆ ಮಾಹಿತಿ ಒದಗಿಸಲಾಗುವುದೆಂದರು.

ಮುಖಂಡರಾದ ಬಿಳಿಚೌಡಯ್ಯ, ಗ್ಯಾರಂಟಿ ಯೋಜನೆ ಅನುಷ್ಠಾನ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಮುಖಂಡರಾದ ಚಿಕ್ಕಯರಗನಾಳು ಮಲ್ಲೇಶ್, ಗುತ್ತಿನಕೆರೆ ಶಿವಮೂರ್ತಿ, ಹರತನಹಳ್ಳಿಜಯಣ್ಣ, ಮಂಜುಳಾಬಾಯಿ, ಸುಲೋಚನಾ ಬಾಯಿ, ರೈತರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಸ್‌ಗೆ ಬೈಕ್ ಡಿಕ್ಕಿ: ಇಬ್ಬರು ಯುವಕರ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೆಎಸ್‌ಆರ್‌ಟಿಸಿ ಬಸ್‌ಗೆ ಬೈಕ್ ಡಿಕ್ಕಿಯಾಗಿ ಯುವಕರಿಬ್ಬರು ಮೃತ ಪಟ್ಟಿರುವ ಘಟನೆ ತಾಲ್ಲೂಕಿನ ಎ. ಚೋಳೇನಹಳ್ಳಿ ಗ್ರಾಮದ ಬಳಿ ಸೋಮವಾರ ನಡೆದಿದೆ. ಕಸಬಾ ಹೋಬಳಿ ದಡಹಳ್ಳಿ ಗ್ರಾಮದ ಸುನಿಲ್ (21) ಶೃಂಗಾರ್ (19) ಮೃತರು.

ಬಸ್ ಚಾಲಕನ ಅಜಾಗರೂಕತೆಯಿಂದ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಒಬ್ಬ ಯುವಕ ಸ್ಥಳದಲ್ಲೇ ಮೃತಪಟ್ಟರೆ ಮತ್ತೊಬ್ಬ ಆಸ್ಪತ್ರೆಗೆ ಕರೆ ದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಸುನಿಲ್ ಹಾಗು ಶೃಂಗಾರ್ ಇಬ್ಬರು ಸ್ನೇಹಿತರಾಗಿದ್ದು ಚನ್ನರಾಯ ಪಟ್ಟಣದಿಂದ ಊರಿಗೆ ತೆರಳು ವಾಗ ಮೈಸೂರು ಕಡೆಯಿಂದ ಬಂದ ಬಸ್ ಡಿಕ್ಕಿಯಾಗಿದೆ. ನಗರ ಠಾಣೆಯಲ್ಲಿ ದೂರು ದಾಖಲಾಗಿದೆ.

# ಕಾಂಗ್ರೆಸ್ ನರ್ತನಕೆ ಜ.24ರಂದು ಪ್ರತ್ಯುತ್ತರ



**ಹೊಳೆನರಸೀಪುರ : ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಸೋಮವಾರ ಹುಟ್ಟೂರು ಹರದನಹಳ್ಳಿಯ ಮನೆ ದೇವರಾದ ಶ್ರೀ ದೇವೇಶ್ವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ವರ್ಷದ ಬಳಿಕ ಹುಟ್ಟೂರಿಗೆ ಆಗಮಿಸಿ ಹೋಮ, ಹವನ, ಧಾರ್ಮಿಕ ಕೈಂಕರ್ಯಗಳಲ್ಲಿ ಭಾಗಿಯಾದರು. ಪುತ್ರ ಹೆಚ್.ಡಿ.ರೇವಣ್ಣ, ಸೊಸೆ ಭವಾನಿ ರೇವಣ್ಣ ಹಾಗು ಜೆಡಿಎಸ್ ಕಾರ್ಯಕರ್ತರು ಜೊತೆಯಲ್ಲಿದ್ದರು.**

» ಮೊದಲನೇ ಪುಟದಿಂದ

ಎತ್ತಿಕೊಂಡು ಬರಬೇಕಾದ ಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ನೀವು ನೀಡುತ್ತಿರುವ ಪ್ರೀತಿ ಮತ್ತು ಬೆಂಬಲವೇ ನನಗೆ ಶಕ್ತಿ ಎಂದರು.

ಈಗಿನ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಬಗ್ಗೆ ಮಾತನಾಡುತ್ತಿದೆ. ಆದರೆ, ಅವರದೇ ಪಕ್ಷದವರು ರಸ್ತೆ ನಿರ್ಮಾಣಕ್ಕೆ ಹಣವಿಲ್ಲ, ಅಭಿವೃದ್ಧಿಗೆ ದುಡ್ಡಿಲ್ಲ ಎಂದು ಹೇಳುತ್ತಿದ್ದಾರೆ. ಇದು ಗ್ಯಾರಂಟಿ ಸರ್ಕಾರದ ವಾಸ್ತವ ಸ್ಥಿತಿ. ಹೀಗಿದ್ದರೂ ಕೇಂದ್ರ ಸರ್ಕಾರ ಅನುದಾನ ನೀಡುತ್ತಿಲ್ಲ ಎಂದು ಎನ್ನುತ್ತಿದ್ದಾರೆ. ಈಗ ನರೇಗಾ ಬಗ್ಗೆ ಮಾತನಾಡಲು ಪ್ರಾರಂಭಿಸಿದ್ದಾರೆ.

ಇತ್ತೀಚಿನ ಮಹಾತ್ಮ ಗಾಂಧಿ ಮೇಲೆ ಅತಿಯಾದ ಪ್ರೀತಿ ತೋರಿಸುತ್ತಿರುವುದು ಕಾಣುತ್ತಿದೆ. ಆದರೆ, ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ನಂತರ ಮಹಾತ್ಮ ಗಾಂಧಿ ಹೆಸರನ್ನೇ ಮರೆತಿದ್ದರು ಎಂದು ಟೀಕಿಸಿದರು.

# ಜ. 6ರಂದು ಪರಿಸರ ಸ್ನೇಹಿ ನಾಟಕ ಪ್ರದರ್ಶನ

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣದ ಪ್ರತಿಮಾ ಟ್ರಸ್ಟ್ ಹಾಗು ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜ.6ರ ಬೆಳಿಗ್ಗೆ 10 ಗಂಟೆಗೆ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಮಗೂ ಬದುಕು ಕೊಡಿ ಎಂಬ ಪರಿಸರ ಸ್ನೇಹಿ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾಧಿ ಕಾರಿ ಕೆ.ಎಸ್.ಲತಾಕುಮಾರಿ ಸಮಾರಂಭ ಉದ್ಘಾಟಿಸಲಿದ್ದಾರೆ. ಶಾಸಕ ಸಿ.ಎನ್.ಬಾಲಕೃಷ್ಣ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್, ರಂಗಕರ್ಮಿ ಪ್ರಸಾದ್ ರಕ್ಷಿದಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ತಾರಾನಾಥ್ ಭಾಗವಹಿಸುವರು.

ಪ್ರತಿಮಾ ಟ್ರಸ್ಟ್ ಅಧ್ಯಕ್ಷ ಉಮೇಶ್ ತೆಂಕನಹಳ್ಳಿ ಅಧ್ಯಕ್ಷತೆ ವಹಿಸಲಿದ್ದಾರೆ. ಈ ನಾಟಕವನ್ನು ಉಮೇಶ್ ತೆಂಕನ ಹಳ್ಳಿ ರಚಿಸಿ, ನಿರ್ದೇಶನ ಮಾಡಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಹಾಗು ಪ್ರೌಢ ಶಾಲೆಯ ವಿದ್ಯಾರ್ಥಿಗಳು ಅಭಿನಯಿಸುತ್ತಿದ್ದಾರೆ.

# ಕಾಂಗ್ರೆಸ್ ದ್ವೇಷ ರಾಜಕಾರಣಕ್ಕೆ ಹೆದರುವುದಿಲ್ಲ : ರೇವಣ್ಣ

» ಮೊದಲನೇ ಪುಟದಿಂದ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ದ್ವೇಷ ಭಾಷಣದ ಕಾಯ್ದೆ ಜಾರಿಗೊಳಿಸುವ ಮೂಲಕ ವಿರೋಧ ಪಕ್ಷವನ್ನು ದಮನ ಮಾಡಲು ಹೊರಟಿದೆ. ಇದಕ್ಕೆ ಹೆದರುತ್ತೇವೆಂಬ ಭ್ರಮೆಯಿಂದ ಕಾಂಗ್ರೆಸ್ ಹೊರ ಬರಲಿ ಎಂದು ಹೇಳಿದರು.

ಜಿಲ್ಲೆ ಭೂಮಾಫಿಯ, ಲೂಟಿ ಕೋರರ ಕೈಗೆ ಸೇರಿದೆ. ಕಂದಾಯ ಸಚಿವರೇ ನಿಮಗೆ ತಾಕತ್ ಇದ್ದರೆ ತನಿಖೆ ಮಾಡಿ ಕ್ರಮ ಕೈಗೊಳ್ಳಿ. ಅಧಿಕಾರಿಗಳೇ ಕಾಂಗ್ರೆಸ್ ಸರ್ಕಾರ ಶಾಶ್ವತವಾಗಿರುತ್ತೆ ತಿಳಿದು ಕೊಳ್ಳಬೇಡಿ. ಪ್ರಕರಣ ದಾಖಲಿಸುತ್ತೇನೆಂದರೆ ಹೆದರಿ ಓಡಿ ಹೋಗಲ್ಲ, ನಾನು ಆರು ಬಾರಿ ಶಾಸಕನಾಗಿದ್ದೀನಿ. ನಾನು ಎರಡೂ ವರೆ ವರ್ಷದಿಂದ ಸಹಿಸಿಕೊಂಡಿದ್ದೇವೆ. ಅಧಿಕಾರಿಗಳೇ ನಮ್ಮ ಕಾರ್ಯಕರ್ತರಿಗೆ ತೊಂದರೆ ಕೊಟ್ಟರೆ ಸುಮ್ಮನೆ ಇರುವುದಿಲ್ಲ. ಕಾನೂನು ಬಿಟ್ಟು ಕೆಲಸ ಮಾಡಿದರೆ ಒಂದಲ್ಲ ಒಂದು ದಿನ ತಗ್ಲಾಕೊ ತಿರಾ. ನಮಗೂ ಕಾಲ ಬಂದೇ ಬರುತ್ತೆ, 2028ರ ವಿಧಾನ ಸಭೆ ಹಾಗು ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನಾವೇನೆಂದು ತೋರಿಸುತ್ತೇವೆಂದು ಎಚ್ಚರಿಸಿದರು.

ಮಾಜಿ ಸಚಿವರಾದ ಹೆಚ್.ಕೆ.ಕುಮಾರಸ್ವಾಮಿ, ಸಾ.ರಾ. ಮಹೇಶ್, ಎ.ಮಂಜು, ಶಾಸಕರಾದ ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರು, ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್, ಮುಖಂಡರಾದ ಎನ್.ಆರ್.ಸಂತೋಷ್, ಹೊಂಗೆರೆ ರಘು, ಅಶೋಕ್ ಬಾಣಾವಾರ ಹಾಗು ತಾಲ್ಲೂಕು ಘಟಕದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಹಾಜರಿದ್ದರು.

# ಕುವೆಂಪು ಆಶಯದಂತೆ ನೆರವೇರಿದ ಮಂತ್ರ ಮಾಂಗಲ್ಯ

• ಪ್ರಜೋದಯ ವರದಿ

**ಹಾಸನ:** ಲೇಖಕ ಹರೀಶ್ ಕಟ್ಟೆಬೆಳಗುಲಿ ಅವರ ಪುತ್ರ ಹೆಚ್.ಮಧುಸೂದನ್ ಹಾಗು ಹರ್ಷಿತ ಅವರು ರಾಷ್ಟ್ರಕವಿ ಕುವೆಂಪು ಅವರ ಆಶಯದಂತೆ ಮಂತ್ರ ಮಾಂಗಲ್ಯದ ಮೂಲಕ ಸರಳ ವಿವಾಹವಾಗಿ ಸಮಾಜಕ್ಕೆ ಮಾದರಿಯಾದರು.

ಕುವೆಂಪು ಜನ್ಮ ದಿನಾಚರಣೆಯ ಮೊದಲ ದಿನವಾದ ಭಾನುವಾರ ನಗರದ ಖಾಸಗಿ ಸಭಾಂಗಣದಲ್ಲಿ ಸರಳ ವಿವಾಹ ನೆರವೇರಿತು. ಸಮಾರಂಭದಲ್ಲಿ ವಧು ವರರಿಬ್ಬರಿಗೂ ಲೇಖಕಿ ರೂಪಾ ಹಾಸನ ಮನಸಾಕ್ಷಿ ಮದುವೆ ಪ್ರಮಾಣ ವಚನ ಬೋಧಿದರು. ಇಂತಹ ಸರಳ ಮದುವೆಗಳು ಹೆಚ್ಚಾಗಿ ಎಲ್ಲರಿಗೂ ಮಾದರಿಯಾಗಬೇಕು. ಆಡಂಬರದ ಮದುವೆ ಸಮಾಜದಲ್ಲಿ ಅಸಮಾನತೆ ಹುಟ್ಟುಹಾಕುತ್ತದೆಂದರು.

ಸಿಪಿಐಎಂ ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಸಮಾಜದಲ್ಲಿ ಅಂತರ್ ಜಾತಿ ವಿವಾಹಗಳು ಹೆಚ್ಚಾಗಬೇಕು. ಪ್ರಜ್ಞಾವಂತರು ಈ ನಿಟ್ಟಿನಲ್ಲಿ ಯೋಚಿಸಬೇಕು. ಸಮಾಜದಲ್ಲಿ ಮಾತ್ರವಲ್ಲದೆ ದಾಂಪತ್ಯ ಜೀವನದಲ್ಲಿಯೂ ಗಂಡು-ಹೆಣ್ಣು ಮೇಲು, ಕೀಳು ಭಾವನೆ ಇರದೆ, ಕುಂಟುಬದಲ್ಲಿಯು ಸಮಾನತೆ ನೆಲೆಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಅಂತರ್ಜಾತಿ ವಿವಾಹದ ಮಹತ್ವದ ಬಗ್ಗೆ ಕವಯತ್ರಿ ಜ.ನಾ.ತೇಜಶ್ರೀ, ಸಾಹಿತಿಗಳಾದ ಯೋಗೀಶ್ ಮಾಸ್ಟರ್, ಮೇಟಿಕೆರೆ ಹಿರಿಯಣ್ಣ, ವಕೀಲ ಸುಖೇಶ್ ಕುಮಾರ ಶೆಟ್ಟಿ, ದಲಿತ ಮುಖಂಡ ರಾಜಶೇಖರ್, ಜಗದೀಶ್, ಕೃಷ್ಣದಾಸ್, ದಂಡೋರ ವಿಜಯ ಕುಮಾರ್, ಚನ್ನಬಸಪ್ಪ ಇತರರಿದ್ದರು.



# ಕನ್ನಡ ಪ್ರೀತಿ ನಿತ್ಯೋತ್ಸವವಾಗಲಿ: ನಾಗೇಶ್ ಕೌಂಡಿನ್ಯ

• ಪ್ರಜೋದಯ ವರದಿ



**ಹಾಸನ:** ಕನ್ನಡ ಭಾಷಾ ಪ್ರೇಮ ಕೇವಲ ನವೆಂಬರ್ ತಿಂಗಳ ರಾಜ್ಯೋತ್ಸವಕ್ಕೆ ಸೀಮಿತವಾಗದೆ ನಿತ್ಯೋತ್ಸವವಾಗಬೇಕೆಂದು ಕಾದಂಬರಿಕಾರ ನಾಗೇಶ್ ಕೌಂಡಿನ್ಯ ಅವರು ಪ್ರತಿಪಾದಿಸಿದರು.

ನಗರದ ಸಪ್ನ ಬುಕ್ ಹೌಸ್‌ನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಹಾಗು 70 ಕೃತಿಗಳ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಕನ್ನಡದ ಹೆಸರಿನ ಕಾರ್ಯ ಕ್ರಮಗಳು ವರ್ಷಪೂರ್ತಿ ಜಾರಿಯಲ್ಲಿರಬೇಕು. ನಾವು ಪ್ರತಿ ಕ್ಷಣ ಗಾಳಿಯನ್ನು ಉಸಿರಾಡು ವಂತೆ, ನಿತ್ಯ ಆಹಾರ ಸೇವಿಸುವಂತೆ, ಕನ್ನಡ ಪುಸ್ತಕವನ್ನು ಓದುವ ಮೂಲಕ ಕನ್ನಡ ಭಾಷೆಯನ್ನು ಜೀವನದ ಅವಿಭಾಜ್ಯ ಅಂಗವಾಗಿಸಿಕೊಳ್ಳಬೇಕು. ದೊಡ್ಡ ಆಲದ ಮರದಲ್ಲಿ ಎಷ್ಟು ಕೊಂಬೆಗಳಿವೆಯೆಂದು ಊಹೆ ಮಾಡಲು ಸಾಧ್ಯವಿಲ್ಲ. ಹಾಗೆಯೇ ಸಪ್ನ ಬುಕ್ ಹೌಸ್ ಭಾರತದ ಅತ್ಯಂತ ದೊಡ್ಡ ಪುಸ್ತಕ ಮಾರಾಟ ಮಳಿಗೆಯಾಗಿದ್ದು, ಪುಸ್ತಕ ಉದ್ಯಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದೆ ಎಂದರು.

ಸಪ್ನ ಬುಕ್ ಹೌಸ್ ಎಲ್ಲಾ ಭಾಷೆಯ ಬರಹಗಾರರಿಗೆ ಉತ್ತೇಜನ ಕೊಡುವುದಲ್ಲದೆ, ಹೊಸ ಪುಸ್ತಕಗಳನ್ನೂ ಹೊರ ತರುತ್ತಿದೆ. ನಾನೂ ಹಲವಾರು ಬರಹಗಾರರಿಗೆ ಮುನ್ನುಡಿ ಬರೆದು ಕೊಟ್ಟಿದ್ದೇನೆ. ಸಪ್ನ ಬುಕ್ ಹೌಸ್ ಪುಸ್ತಕ ಲೋಕಾರ್ಪಣೆ ಮಾಡುತ್ತಿರುವುದು ಹೆಮ್ಮೆಯ ವಿಷಯವೆಂದರು.

ಮದುವೆ, ಗೃಹ ಪ್ರವೇಶ, ನಾಮಕರಣ ಹೀಗೆ ಎಲ್ಲಿಗೆ ಹೋದರೂ ನಾನು ಉಡುಗೊರೆಯಾಗಿ ಪುಸ್ತಕ ನೀಡಿ ಪೂರ್ತಿ ಪುಸ್ತಕ ಓದಲು ಸಾಧ್ಯವಾಗದಿದ್ದರೂ ಕನಿಷ್ಟ 5 ಪುಟ ಓದಲು ಸಲಹೆ ನೀಡುತ್ತೇನೆ. ಪುಸ್ತಕ ನೀಡಿದರೆ ಓದುವ ಅಭಿರುಚಿ ಬೆಳೆಯುವುದರ ಜೊತೆಗೆ ಸಂಸ್ಥೆ ಬೆಳೆದ ಹಾಗೆ ಪುಸ್ತಕ ಉದ್ಯಮವೂ ಬೆಳೆಯುತ್ತದೆಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಅವರು ಮಾತನಾಡಿ, 70ನೇ ಕನ್ನಡ ರಾಜ್ಯೋತ್ಸವದಂದು 70 ಕೃತಿ ಲೋಕಾರ್ಪಣೆ ಮಾಡುತ್ತಿರುವ ಸಪ್ನ ಬುಕ್ ಹೌಸ್ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದೆ ಎಂದರು.

ಸಾಹಿತಿಗಳಾದ ಎ.ಎಲ್.ಚನ್ನೇಗೌಡ, ಹೊನ್ನಶೆಟ್ಟಿಹಳ್ಳಿ ಗಿರಿರಾಜ್, ಶೈಲಜಾ ಹಾಸನ್, ಕೌಶಿಕ್ ಕೂಡುರಸ್ತೆ ಮಾತನಾಡಿದರು. ಸಪ್ನ ಬುಕ್ ಹೌಸ್‌ನ ಶಾಖಾ ವ್ಯವಸ್ಥಾಪಕಿ ಬಿ.ಎಸ್. ಶಾಂತಲಾ ಸ್ವಾಗತಿಸಿದರು. ಶ್ರೀರಕ್ಷಾ ನಿರೂಪಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK